ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 172

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795

ಮಂಗಳವಾರ: 16-06-2026

## ಇಂದು ಕೈ ಶಾಸಕರು ರೆಸಾರ್ಟ್‌ಗೆ, ಸಂಜೆ ಸಿಎಲ್‌ಬಿ ಸಭೆ

**ಬೆಂಗಳೂರು, ಜೂ. 15–** ವಿಧಾನ ಪರಿಷತ್ತಿನ 7 ಸ್ಥಾನಗಳಿಗೆ ಜೂ. 18 ಗುರುವಾರದಂದು ನಡೆಯುವ ಚುನಾವಣೆಯಲ್ಲಿ ಯಾವುದೇ ಅಡ್ಡ ಮತದಾನಕ್ಕೆ ಅವಕಾಶ ಇಲ್ಲದಂತೆ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವು ಸುಗಮವಾಗುವಂತೆ ನೋಡಿಕೊಳ್ಳಲು ಎಲ್ಲ ಕಾಂಗ್ರೆಸ್ ಶಾಸಕರನ್ನು ಇಂದು ರೆಸಾರ್ಟ್‌ಗೆ ಕರೆದೊಯ್ಯಲಾಗುತ್ತಿದೆ.

ವಿಧಾನ ಪರಿಷತ್ತಿನ ಚುನಾವಣೆ ಹಿನ್ನೆಲೆಯಲ್ಲಿ ಇಂದು ಸಂಜೆ 6 ಗಂಟೆಗೆ ಬಿಡದಿ ಬಳಿಯ ಖಾಸಗಿ ರೆಸಾರ್ಟ್‌ನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಲಿದ್ದು, ಈ ಸಭೆಯಲ್ಲಿ ಪಾಲ್ಗೊಳ್ಳುವ ಕಾಂಗ್ರೆಸ್ ಶಾಸಕರು ಮಂಗಳವಾರ ಮತ್ತು ಬುಧವಾರ ಎರಡು ದಿನ ರೆಸಾರ್ಟ್‌ನಲ್ಲೇ ವಾಸ್ತವ್ಯ ಹೂಡಿ ಗುರುವಾರ ಅಲ್ಲಿಂದಲೇ ನೇರವಾಗಿ ವಿಧಾನಸೌಧಕ್ಕೆ ಮತ ಹಾಕಲು ಬರುವರು.

ವಿಧಾನ ಪರಿಷತ್ತಿನ 7 ಸ್ಥಾನಗಳಿಗೆ 8 ಅಭ್ಯರ್ಥಿಗಳು ಕಣದಲ್ಲಿರುವುದರಿಂದ ಕಾಂಗ್ರೆಸ್ ಪಕ್ಷ ತನ್ನ ಐವರು ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ರಣತಂತ್ರ ರೂಪಿಸಿದ್ದು, ಅದರಂತೆ ಕಾಂಗ್ರೆಸ್ ಶಾಸಕರ ಮತಗಳು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮಾತ್ರ ಚಲಾಯಿಸಲು ಏನೆಲ್ಲಾ ಮಾಡಬೇಕೋ ಅದನ್ನೆಲ್ಲಾ ಈಗಾಗಲೇ ಮಾಡಲಾಗಿದೆ.

ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ನಂತರ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್‌ನ ಮೊದಲ ಶಾಸಕಾಂಗ ಪಕ್ಷದ ಸಭೆ ನಾಳೆ ನಡೆಯುತ್ತಿದ್ದು, ಈ ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರುಗಳು ಹಾಗೂ ಪಕ್ಷದ ಎಲ್ಲಾ ಕಾರ್ಯಾಧ್ಯಕ್ಷರು ಪಾಲ್ಗೊಳ್ಳಲಿದ್ದು, ಈ ಸಭೆಗೆ ಬರುವಂತೆ ಕಾಂಗ್ರೆಸ್‌ನ ಎಲ್ಲಾ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಸೂಚನೆಯನ್ನು ರವಾನಿಸಲಾಗಿದೆ.

ಇಂದಿನ ಸಭೆಯಲ್ಲಿ ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಯಾವ ರೀತಿ ಮತ ಚಲಾಯಿಸಬೇಕು, ಯಾವ ಶಾಸಕರು ಕಾಂಗ್ರೆಸ್‌ನ ಯಾವ ಅಭ್ಯರ್ಥಿಗೆ ಮತ ಹಾಕಬೇಕು ಎಂಬೆಲ್ಲಾ ಬಗ್ಗೆ ಶಾಸಕರುಗಳಿಗೆ ಸೂಚನೆ ನೀಡಲಾಗುತ್ತದೆ.

ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಮೊದಲ ಮತ್ತು ದ್ವಿತೀಯ ಪ್ರಾಶಸ್ತ್ಯದ ಮತ ಚಲಾಯಿಸಲು ಅವಕಾಶವಿದ್ದು, ಮೊದಲ ಪ್ರಾಶಸ್ತ್ಯದ ಮತವನ್ನು ಪಕ್ಷ ಸೂಚಿಸಿದ ಅಭ್ಯರ್ಥಿಗಳಿಗೆ ಹಾಕುವ ಶಾಸಕರುಗಳು ಎರಡನೇ ಪ್ರಾಶಸ್ತ್ಯದ ಮತವನ್ನು ಯಾವ ಕಾಂಗ್ರೆಸ್ ಅಭ್ಯರ್ಥಿಗೆ ಹಾಕಬೇಕು ಎಂಬುದನ್ನು ಇಂದಿನ ಶಾಸಕಾಂಗ ಪಕ್ಷದ ಸಭೆಯಲ್ಲಿ ಎಲ್ಲಾ ಶಾಸಕರಿಗೂ ತಿಳಿಸಲಾಗುತ್ತದೆ.

ಈ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ 8ನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿರುವುದರಿಂದ ಕಾಂಗ್ರೆಸ್ ಪಕ್ಷದಿಂದ ಯಾರೂ ಅಡ್ಡ ಮತದಾನ ಮಾಡದಂತೆ ಕಟ್ಟೆಚ್ಚರ ವಹಿಸಲಾಗಿದ್ದು, ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಸೂಚನೆಯನ್ನು ಎಐಸಿಸಿ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಶಾಸಕರುಗಳಿಗೆ ನೀಡುವರು ಎಂದು ಹೇಳಲಾಗಿದೆ.

ವಿಧಾನ ಪರಿಷತ್ತಿನ 7 ಸ್ಥಾನಗಳ ಪೈಕಿ 5 ಸ್ಥಾನಗಳಿಗೆ ಕಾಂಗ್ರೆಸ್ ಪಕ್ಷ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಎಐಸಿಸಿ ಕಾರ್ಯದರ್ಶಿ ಪಿ.ವಿ. ಮೋಹನ್, ತಿಪ್ಪಣ್ಣ ಕಮಕನೂರು, ಮಳವಳ್ಳಿ ಶಿವಣ್ಣ ಹಾಗೂ ವಿನಯ್ ಕಾರ್ತಿಕ್ ಇವರುಗಳನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಿದೆ.

ಪ್ರತಿ ಅಭ್ಯರ್ಥಿಯ ಗೆಲುವಿಗೆ 28 ಶಾಸಕರ ಮತ ಅಗತ್ಯವಿದ್ದು, ಕಾಂಗ್ರೆಸ್ ಪಕ್ಷ ತನ್ನ 136 ಶಾಸಕರ ಜತೆಗೆ ಪಕ್ಷೇತರ ಶಾಸಕರುಗಳಾದ ದರ್ಶನ್ ಪುಟ್ಟಣ್ಣಯ್ಯ ಹಾಗೂ ಲತಾ ಮಲ್ಲಿಕಾರ್ಜುನ್ ಇವರುಗಳ ಬೆಂಬಲವನ್ನು ಪಡೆದಿದ್ದು, ಇವರ ಜತೆಗೆ ಬಿಜೆಪಿಯಿಂದ ಉಚ್ಚಾಟಿತರಾಗಿರುವ ಶಾಸಕರಾದ ಎಸ್.ಟಿ. ಸೋಮಶೇಖರ್ ಹಾಗೂ ಶಿವರಾಮ್ ಹೆಬ್ಬಾರ್ ಇವರುಗಳ ಬೆಂಬಲವನ್ನು ಪಡೆಯುವ ಸಾಧ್ಯತೆಗಳಿದೆ. ಈ ಲೆಕ್ಕಾಚಾರದ ಪ್ರಕಾರ ಕಾಂಗ್ರೆಸ್‌ನ ಐವರು ಅಭ್ಯರ್ಥಿಗಳು ಗೆಲ್ಲಲು ಯಾವುದೇ ತೊಂದರೆ ಇಲ್ಲ.

ವಿಧಾನ ಪರಿಷತ್ತಿನ ಚುನಾವಣೆ ಗೌಪ್ಯ ಮತದಾನವಾಗಿರುವುದರಿಂದ ಯಾರಾದರೂ ಅಡ್ಡಮತದಾನ ಮಾಡಬಹುದು ಎಂಬ ಭೀತಿಯೂ ಇದ್ದು, ಅದಕ್ಕೆ ಅವಕಾಶ ಕೊಡದಂತೆ ಕಾಂಗ್ರೆಸ್ ಶಾಸಕರನ್ನು ಮತದಾನದವರೆಗೂ ರೆಸಾರ್ಟ್‌ನಲ್ಲಿ ಇರಿಸುವ ತಂತ್ರಗಾರಿಕೆಯನ್ನು ಮಾಡಲಾಗಿದೆ.

ಇಂದು ಸಂಜೆ ನಡೆಯುವ ಶಾಸಕಾಂಗ ಪಕ್ಷದ ಸಭೆಯಲ್ಲಿ ಎಲ್ಲಾ ಕಾಂಗ್ರೆಸ್ ಶಾಸಕರಿಗೆ ಸೂಕ್ತ ನಿರ್ದೇಶನ ನೀಡಲಾಗುತ್ತದೆ. ಯಾರೂ ಪಕ್ಷದ ಅಭ್ಯರ್ಥಿಯನ್ನು ಬಿಟ್ಟು ಬೇರೆಯವರಿಗೆ ಮತ ಹಾಕದಂತೆ ತಾಕೀತು ಮಾಡಲಾಗುತ್ತದೆ 2ನೇಪುಟಕ್ಕೆ

## ಎಸ್.ಐ.ಆರ್-2026 ರ ಪ್ರಕ್ರಿಯೆಯನ್ನು ಪರಿಶೀಲಿಸಿದ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ



ಧೈರ್ಯದ ದಾರಿ

**ಮಾನ್ವಿ :** ಪಟ್ಟಣದಲ್ಲಿ ಬಿರುಸಿನ ಮತದಾರರ ಸಮಗ್ರ ಪರಿಷ್ಕರಣೆಯ ಪ್ರಕ್ರಿಯೆಯನ್ನು ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಪರಿಶೀಲಿಸಿ ಮಾತನಾಡಿ ಭಾರತ ಚುನಾವಣೆಯ ಆಯೋಗದ ಆದೇಶ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಕೂಡ ತಮ್ಮ ದಾಖಲಾತಿಗಳನ್ನು ಬಿ.ಎಲ್.ಒ.ಗಳಿಗೆ ನೀಡಿ ಎಸ್.ಐ.ಆರ್-2026 ರ ಪ್ರಕ್ರಿಯೆಯಲ್ಲಿ ದಾಖಲಾತಿ ಮಾಡಿಕೊಳ್ಳಬೇಕು ಎಸ್.ಐ.ಆರ್-2026ರ ಪ್ರಕ್ರಿಯೆಯಿಂದ ದೂರ ಉಳಿದಲ್ಲಿ ಮತದಾನ ಹಕ್ಕಿನಿಂದ ವಂಚಿತರಾಗುತ್ತಾರೆ. ಮತದಾರರ ಪಟ್ಟಿಯಿಂದ ಹೋರಗಡೆ ಇದ್ದರೆ ಸರಕಾರದ ಸವಲತ್ತುಗಳಿಂದ ದೂರ ಉಳಿದಂತೆಯಾಗುತ್ತದೆ. ಪಟ್ಟಣದ ಶಾಲೆ,ಅಂಗನವಾಡಿ ಕೇಂದ್ರ, ಪುರಸಭೆ, ತಹಸಿಲ್ದಾರರ ಕಚೇರಿಗೆ ಭೇಟಿ ನೀಡಿ. ಎಸ್.ಐ.ಆರ್-2026 ರ ಪ್ರಕ್ರಿಯೆಯ ಅಗತ್ಯಮಾಹಿತಿಯನ್ನು ಬಿ.ಎಲ್.ಒ.ಗಳಿಂದ ಪಡೆಯಬಹುದಾಗಿದೆ ಮತದಾರರ ಸಮಗ್ರ ಪರಿಷ್ಕರಣೆಯ ಯಶಸ್ವಿಗೆ ಪ್ರತಿಯೊಬ್ಬರು ಸಹಕರಿಸುವ ಮೂಲಕ .ಸದೃಢ ಭಾರತ ನಿರ್ಮಾಣ ಕ್ಕೆ ಕೈ ಜೋಡಿಸುವಂತೆ ಕೋರಿದರು.

## ಜೋಳಬೆಳೆದ ರೈತರ ಖಾತೆಗೆ ಹಣ ಜಮೆ ಮಾಡುವಂತೆ ಒತ್ತಾಯಿಸಿ ರಸ್ತೆ ತಡೆ ನಡೆಸಿ ರೈತರಿಂದ ಪ್ರತಿಭಟನೆ





ಧೈರ್ಯದ ದಾರಿ

**ಮಾನ್ವಿ:** ತಾಲೂಕಿನ ಪೋತ್ನಾಳ್ ಗ್ರಾಮದ ಬಳಗನೂರ್ ವೃತ್ತದ ಬಳಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಸಮಿತಿ ವತಿಯಿಂದ ಮಾನ್ವಿ ಮತ್ತು ಸಿಂಧನೂರು ತಾಲೂಕುಗಳಲ್ಲಿ ಜೋಳ ಬೆಳೆದು ಖರೀದಿ ಕೇಂದ್ರಗಳಿಗೆ ಮಾರಾಟ ಮಾಡಿದ ರೈತರಖಾತೆಗೆ ಹಣ ಜಮಾ ಮಾಡುವಂತೆ ಒತ್ತಾಯಿಸಿ ನೂರಾರು ರೈತರು ಪ್ರತಿಭಟನೆ ನಡೆಸಿ ಸಿಂಧನೂರು ತಹಶೀಲ್ದಾರ್ ಅರುಣ್ ಕುಮಾರ್ ರವರಿಗೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಅಮೀನ ಪಾಷ ದಿದ್ದಿಗಿ ಮನವಿ ಸಲ್ಲಿಸಿ ಮಾತನಾಡಿ ರಾಯಚೂರು ಜಿಲ್ಲೆಯ ರೈತರು ಸರಕಾರದ ಜೋಳ ಖರೀದಿ ಕೇಂದ್ರಗಳಿಗೆ ತಮ್ಮ ಮುಂಗಾರು ಜೋಳವನ್ನು ಮಾರಾಟ ಮಾಡಿ ಮೂರರಿಂದ ನಾಲ್ಕು ತಿಂಗಳು ಕಳೆದರೂ ಕೂಡ ಇನ್ನು ರೈತರ ಖಾತೆಗೆ ಸರಕಾರದಿಂದ ಹಣ ಜಾಮೆಯಾಗದೆ ಇರುವುದರಿಂದ ರೈತರು ಮುಂಗಾರು ಹಂಗಾಮಿನಲ್ಲಿ ಕೃಷಿ ಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ ರೈತರು ತೀವ್ರವಾದ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವುದರಿಂದ ಕೂಡಲೇ ಸದರಕಾರದಿಂದ ರೈತರ ಖಾತೆಗೆ ಹಣವನ್ನು ಜಮಾ ಮಾಡಬೇಕು ಇಲ್ಲದೆ ಇದ್ದಲ್ಲಿ ರೈತರೊಂದಿಗೆ ತೀವ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ರೈತರಿಂದ ಮನವಿ ಸ್ವೀಕರಿಸಿ ಸಿಂಧನೂರು ತಹಶೀಲ್ದಾರ್ ಅರುಣ್ ಕುಮಾರ್ ಮಾತನಾಡಿ ರೈತರ ಖಾತೆಗೆ ಹಣ ಸಂದಾಯ ಮಾಡುವ ಕುರಿತು ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗುವುದು ಹಾಗೂ ಶೀಘ್ರವೇ ರೈತರ ಖಾತೆಗೆ ಸರಕಾರದಿಂದ ಹಣ ಜಮೆಯಾಗಲಿದೆ ಎಂದು ಬರವಸೆ ನೀಡಿದರು.

ಪೋತ್ನಾಳ್ ಗ್ರಾಮದ ಬಳಗನೂರ್ ವೃತ್ತದ ಬಳಿ ರೈತರು ರಸ್ತೆ ತಡೆ ನಡೆಸಿದರಿಂದ ರಾಯಚೂರು ಸಿಂಧನೂರು ರಸ್ತೆ ಸಂಚಾರಕ್ಕೆ ಅಡತಡೆ ಉಂಟಾಯಿತು.

ರೈತ ಮುಖಂಡರಾದ ಬಸವರಾಜ ನಾಯಕ, ವೀರೇಶ, ಚನ್ನಬಸವ ರಾಗಲಪರ್ವಿ, ಚನ್ನನಗೌಡ ಬನ್ನಿಗನೂರು, ಆದಪ್ಪ ನಾಯಕ ದಳಪತಿ, ಎಸ್. ಕರಿಯಪ್ಪ, ತಿಮ್ಮಣ್ಣ ರಾಮತ್ನಾಳ, ದುರಗಪ್ಪ ಕಟ್ಟಿಕಾರ, ಓಮಣ್ಣ ಸೇರಿದಂತೆ ಬನ್ನಿಗನೂರು, ರಾಮತ್ನಾಳ, ಯಾಪಲಪರ್ವಿ, ವಲ್ಕಂದಿನ್ನಿ, ರಾಗಲಪರ್ವಿ ಹಾಗೂ ಧುಮತಿ ಸೇರಿದಂತೆ ಸುತ್ತಮುತ್ತಲಿನ ಅನೇಕ ಗ್ರಾಮಗಳ ನೂರಾರು ರೈತರು ಹೋರಾಟದಲ್ಲಿ ಭಾಗವಹಿಸಿದ್ದರು.

## ಮತ ಚೀಟಿ ಇದ್ದವರಿಗೆ ಮಾತ್ರ ಗ್ಯಾರಂಟಿ: ಡಿಕೆಶಿ



**ಬೆಂಗಳೂರು,ಜೂ.15:** ಗ್ಯಾರಂಟಿ ಯೋಜನೆಗಳನ್ನು ಸರ್ಕಾರ ಸ್ಥಗಿತಗೊಳಿಸಲಿದೆ ಎಂಬ ವಿರೋಧ ಪಕ್ಷಗಳ ಆರೋಪವನ್ನು ತಳ್ಳಿಹಾಕಿದ ಮುಖ್ಯಮಂತ್ರಿಗಳು, "ಟೀಕೆ ಮಾಡುವುದಕ್ಕಾಗಿಯೇ ವಿರೋಧ ಪಕ್ಷದವರಿದ್ದಾರೆ. ಯೋಜನೆಗಳನ್ನು ತಡೆಯುವುದು ಅವರ ಕೆಲಸ, ಅದನ್ನೇ ಅವರು ಮಾಡುತ್ತಿದ್ದಾರೆ.

ಅವರ ಕೈಯಲ್ಲಿ ಇಂತಹ ಯೋಜನೆಗಳನ್ನು ಜಾರಿ ಮಾಡಲು ಸಾಧ್ಯವಾಗಿಲ್ಲ. ಆದರೆ ನಾವು ಮಾಡಿಕೊಟ್ಟಿದ್ದೇವೆ" ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದರು. ಇಂದು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಿಡದಿ ಟೌನ್‌ಶಿಪ್ ವಿವಾದ ಹಾಗೂ ಗ್ಯಾರಂಟಿ 2ನೇಪುಟಕ್ಕೆ

## ಜೂ.22 ರಂದು ಚೆಕ್ ಡ್ಯಾಂಮ್‌ಗಳ ನಿರ್ಮಾಣದಲ್ಲಿ ಎಸ್.ಇ.ಪಿ,. ಟಿ.ಎಸ್.ಪಿ. ದುರ್ಬಳಕೆಯಾಗಿರುವುದನ್ನು ಖಂಡಿಸಿ ಧರಣಿ ಬಸವರಾಜ ನಕ್ಕುಂದಿ.




ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಪತ್ರಿಕಾ ಭವನದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಾಮಾಜಿಕ ನ್ಯಾಯಕ್ಕಾಗಿ ಚಳುವಳಿ ಜಿಲ್ಲಾ ಸಮಿತಿ ರಾಯಚೂರು ಹಾಗೂ ಕರ್ನಾಟಕ ರಾಜ್ಯ ಸುರಕ್ಷಾ ಶ್ರಮೀಕ ವರ್ಗ ಕಟ್ಟಡ ನಿರ್ಮಾಣ ಮತ್ತು ಅಸಂಘಟಿತರ ಕಾರ್ಮಿಕ ಸಂಘ ,ದಲಿತ ಸಮರ ಸೇನೆ ,ಕರ್ನಾಟಕ ಸ್ಲಮ್ ಜನರ ಕ್ರಿಯಾ ವೇದಿಕೆ ,ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮಬಣ ಸಂಘಟನೇಯಾ ಸಂಯುಕ್ತಾಶ್ರಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಮಿತಿಯ ಜಿಲ್ಲಾಧ್ಯಕ್ಷರಾದ ಬಸವರಾಜ ನಕ್ಕುಂದಿ ಮಾತನಾಡಿರಾಜ್ಯ ಸರಕಾರವು ಅಂತರ್ಜಲಮಟ್ಟವನ್ನು ವೃದ್ದಿಸುವುದು, ರೈತರ ಜಮೀನುಗಳಿಗೆ ನೀರು ಹರಿಸುವುದಕ್ಕೆ ಅಗತ್ಯ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಉದ್ದೇಶದಿಂದ ಹಳ್ಳಗಳಿಗೆ, ನಾಲೆಗಳಿಗೆ, ಗುಡ್ಡಗಾಡು ಪ್ರದೇಶವಿರುವ ಕಡೆ ಚೆಕ್ ಡ್ಯಾಂ ಗಳನ್ನು ನಿರ್ಮಾಣಮಾಡುವ ಕಾಮಗಾರಿಯನ್ನು ಕೈಗೊಂಡಿದು ಮಾನ್ವಿ ಮತ್ತು ಸಿರವಾರ ತಾಲೂಕುಗಳಲ್ಲಿ 80 ಕ್ಕೂ ಹೆಚ್ಚು ಚೆಕ್‌ಡ್ಯಾಂಗಳನ್ನು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಅತ್ಯಂತ ಅವೈಜ್ಞಾನಿಕವಾಗಿ ಕಳಪೆ ಗುಣಮಟ್ಟದಲ್ಲಿ ಕೈಗೊಂಡಿದ್ದು ನಿಯಮದಂತೆ ಎಸ್.ಇ.ಪಿ,. ಟಿ.ಎಸ್.ಪಿ. ಯೋಜನೆಯಡಿಯಲ್ಲಿ ದಲಿತರ ಜಮೀನುಗಳಿಗೆ ನೀರವಾರಿಯನ್ನು ಕಲ್ಪಿಸುವುದಕ್ಕಾಗಿ ಪ.ಜಾತಿ,ಪ,ಪಂಗಡ ಸಮುದಾಯಗಳ ರೈತರ ಜಮೀನಿರುವ ಕಡೆ ಚೆಕ್ ಡ್ಯಾಂಗಳನ್ನು ಕಟ್ಟದೆ ಸಾಮಾನ್ಯ ವರ್ಗಕ್ಕೆ ಸೇರಿದ ರೈತರು ಹೆಚ್ಚಿರುವ ಕಡೆ ಚೆಕೆಡ್ಯಾಂಗಳನ್ನು ನಿರ್ಮಾಣ ಮಾಡಲಾಗಿರುವುದರಿಂದ ಪ.ಜಾತಿ,ಪ,ಪಂಗಡ ಸಮುದಾಯಗಳ ರೈತರಿಗೆ ಅನ್ಯಾಯವಾಗಿರುವುದನ್ನು ಖಂಡಿಸಿ, ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಹಾಗೂ ಸಮಗ್ರವಾದ ತಣಿಖೆಯನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿ ಜೂ.22 ರಂದು ಮಾನ್ವಿಯಲ್ಲಿನ ತಾಲೂಕು ಪಂಚಾಯತ್ ಅವರಣದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಾಮಾಜಿಕ ನ್ಯಾಯಕ್ಕಾಗಿ ಚಳುವಳಿ ಜಿಲ್ಲಾ ಸಮಿತಿ ರಾಯಚೂರು ಹಾಗೂ ಕರ್ನಾಟಕ ರಾಜ್ಯ ಸುರಕ್ಷಾ ಶ್ರಮೀಕ ವರ್ಗ ಕಟ್ಟಡ ನಿರ್ಮಾಣ ಮತ್ತು ಅಸಂಘಟಿತರ ಕಾರ್ಮಿಕ ಸಂಘ ,ದಲಿತ ಸಮರ ಸೇನೆ ,ಕರ್ನಾಟಕ ಸ್ಲಮ್ ಜನರ ಕ್ರಿಯಾ ವೇದಿಕೆ ,ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮಬಣ ಸಂಘಟನೇಯಾ ಸಂಯುಕ್ತಾಶ್ರಯದಲ್ಲಿ ಧರಣಿ ನಡೆಸಲಾಗುವುದು ಎಂದು ತಿಳಿಸಿದರು.

ಕಾರ್ಮಿಕ ಸಂಘದ ಅಧ್ಯಕ್ಷರಾದ ಪರಶುರಾಮ್ ಬಾಗಲವಾಡ, ದಲಿತ ಚಳುವಳಿ ತಾ.ಅಧ್ಯಕ್ಷರಾದ ಚಂದ್ರಶೇಖರ, ದಲಿತ ಸಮರ ಸೇನೆ ತಾ.ಅಧ್ಯಕ್ಷರಾದ ಅನೀಲ್ ಕುಮಾರ, ದಲಿತ ಸಂಘರ್ಷ ಸಮಿತಿ ಜಿಲ್ಲಾ ಪ್ರ.ಕಾರ್ಯದರ್ಶಿ ನರಸರೆಡ್ಡಿ , ವಿದ್ಯಾರ್ಥಿ ಒಕ್ಕೂಟದ ರಾಜ್ಯ ಪ್ರ.ಕಾರ್ಯದರ್ಶಿ ಪ್ರಶಾಂತ್ ಜಾಗೀರ್ ಪನ್ನೂರ್, ದ.ಸಂಘರ್ಷ ಸಮಿತಿ ಕಾರ್ಯದರ್ಶಿ ವೆಂಕಟೇಶ್, ಅಮರೇಶ್ ಜಾಗೀರ್ ಪನ್ನೂರು ಸೇರಿದಂತೆ ಇನ್ನಿತರರು ಇದ್ದರು.

## ಉಡಮಗಲ ಖಾನಾಪೂರ ಪ್ರೌಢಶಾಲೆಯಲ್ಲಿ ಎಸ್. ಐ .ಆರ್ ಕಾರ್ಯಕ್ರಮ




ಧೈರ್ಯದ ದಾರಿ

**ರಾಯಚೂರು:** ತಾಲೂಕಿನ ಸರ್ಕಾರಿ ಪ್ರೌಢಶಾಲೆ ಉಡಮಗಲ್ ಖಾನಾಪೂರ ಶಾಲೆಯಲ್ಲಿ ಎಸ್.ಐ.ಆರ್ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕ ಕುರಿತು ಕಾರ್ಯಕ್ರಮ ಜರಗಿತು. ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶಿಕ್ಷಣ ವಿಭಾಗದ ಇ ಎಲ್ ಸಿ ಕ್ಲಬ್ ನೋಡಲ್ ಅಧಿಕಾರಿ ಡಾ. ದಂಡಪ್ಪ ಬಿರಾದಾರ ಮಾತನಾಡುತ್ತಾ ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಮತದಾರರ ಪಟ್ಟಿಯು ವಿಶೇಷ ಸಮಗ್ರ ಪರಿಷ್ಕಣೆ ಕಾರ್ಯಕ್ರಮ ಪ್ರಾರಂಭಗೊಂಡಿದ್ದು. ಅದರಂತೆ ರಾಯಚೂರು.ಜಿಲ್ಲೆಯಲ್ಲಿ ಈ ಪ್ರಕ್ರಿಯೆ ಪ್ರಾರಂಭವಾಗಿದೆ .ಈಗಾಗಲೇ ಗೌರವಾನಿತ ಜಿಲ್ಲಾಧಿಕಾರಿಗಳು ಮತ್ತು ಶ ಸ್ವಿಪ ಸಮಿತಿಯ ಅಧ್ಯಕ್ಷರಾದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಕ ಅಧಿಕಾರಿಗಳು ನಿರಂತರವಾಗಿ ಸಂಬಂಧ ಪಟ್ಟ ಇಲಾಖೆಗಳಿಗೆ ಮಾಹಿತಿ ನೀಡುತ್ತ ಕಾರ್ಯಕ್ರಮವನ್ನು ಮಾಡುತ್ತಿದ್ದು. ಬಿ.ಎಲ್.ಒ ಅವರು ಸಮಗ್ರ ಮತದಾರ ಪಟ್ಟಿಯ ಪರಿಷ್ಕರಣೆಯ ಕಾರ್ಯಕ್ರಮದಲ್ಲಿ ತೊಡಗಿದ್ದಾರೆ. ಇದರ ಮೂಲ ಉದ್ದೇಶ ಇಷ್ಟೇ. ಸ್ಪಷ್ಟ .ಶುದ್ಧ ಮಾದರಿಯ ಮತದಾರರ ಪಟ್ಟಿಯನ್ನು ತಯಾರಿಸುವುದು .ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರಗೆ ಉಳಿಯಬಾರದು .ಅನಹರ ಮತದಾರರು ಮತದಾರ ಪಟ್ಟಿಯಲ್ಲಿ ಸೇರಬಾರದು. ಎಂಬ ಮೂಲ ಉದ್ದೇಶವನ್ನು ಇಟ್ಟುಕೊಂಡು ಎಸ್.ಐ.ಆರ್ ಕಾರ್ಯಕ್ರಮ ನಡೆಯುತ್ತದೆ .

ಈ ಒಂದು ಪ್ರಜಾಪ್ರಭುತ್ವ ಹಬ್ಬವಾಗಿರುವ ಮತದಾನದ ಪ್ರಕ್ರಿಯೆ ಇದೊಂದು ಉತ್ತಮವಾದ ಕಾರ್ಯ ಯೋಜನೆ ಆಗಿದೆ. ಮತದಾರ ಪಟ್ಟಿಯು ಪರಿಷ್ಕರಣೆ ಜಾಗೃತ ನಾಗರಿಕರ ಹೊಣೆಗಾರಿಕೆಯಾಗಿದೆ .

ಮತದಾರ ಪಟ್ಟಿ ಸರಿಯಾಗಿರಲಿ ಪ್ರಜಾಪ್ರಭುತ್ವ ಬಲವಾಗಲಿ ಎಂಬುದನ್ನ ಪ್ರತಿಯೊಬ್ಬರು ತಿಳಿದುಕೊಳ್ಳಬೇಕು .ಎಂದು ಡಾ. ಬಿರಾದಾರ್ ಹೇಳಿದರು .ಶಾಲಾ ಮುಖ್ಯ ಗುರುಗಳಾದ ವೀರೇಶ್ ಅಂಗಡಿ ಅವರು ಮಾತನಾಡುತ್ತಾ ಯಾವುದೇ ಕಾರಣಕ್ಕೂ ಮತದಾರರ ಪಟ್ಟಿಯಲ್ಲಿ ಸತ್ತವರ ಹೆಸರು ಊರು ಬಿಟ್ಟು ಬೇರೆ ಊರಿಗೆ ಹೋದವರ ಹೆಸರು ಅಥವಾ ಅಲ್ಲಿ 2ನೇಪುಟಕ್ಕೆ

ಮೊದಲನೇ ಪುಟದಿಂದ

# ಇಂದು ಕೈ ಶಾಸಕರು ರೆಸಾರ್ಟ್‌ಗೆ, ಸಂಜೆ ಸಿಎಲ್‌ಬಿ ಸಭೆ

ಎಂದು ಪಕ್ಷದ ಮೂಲಗಳು ಹೇಳಿವೆ. ಇಂದಿನ ಶಾಸಕಾಂಗ ಪಕ್ಷದ ಸಭೆಯ ನಂತರ ಬಹುತೇಕ ಶಾಸಕರು ಬಿಡದಿಯ ಖಾಸಗಿ ರೆಸಾರ್ಟ್‌ನಲ್ಲೇ ತಂಗಲಿದ್ದು, ಮಂಗಳವಾರ ಮತ್ತು ಬುಧವಾರ ರಾತ್ರಿ ಎರಡು ದಿನ ಅಲ್ಲೇ ಉಳಿಯುವ ಶಾಸಕರು ಗುರುವಾರ ಬೆಳಿಗ್ಗೆ ರೆಸಾರ್ಟ್‌ನಿಂದಲೇ ವಿಧಾನಸೌಧಕ್ಕೆ ಬರಲಿದ್ದಾರೆ.
ವಿಧಾನ ಪರಿಷತ್ತಿಗೆ ಮತದಾನ ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೂ ನಡೆಯಲಿದ್ದು, 5 ಗಂಟೆಯ ನಂತರ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟಿಸಲಾಗುತ್ತದೆ.

ಈ ಚುನಾವಣೆಗೆ ಬಿಜೆಪಿಯಿಂದ ಲಿಂಗರಾಜ ಪಾಟೀಲ್ ಮತ್ತು ರಘು ಕೌಟಿಲ್ಯ ಅಭ್ಯರ್ಥಿಗಳಾಗಿದ್ದು, 7ನೇ ಸ್ಥಾನಕ್ಕೆ ಸ್ಪರ್ಧೆ ನೀಡಲು ಬಿಜೆಪಿ ಬೆಂಬಲ ಪಡೆದು ಜೆಡಿಎಸ್‌ನ ಗೋವಿಂದರಾಜು ಕಣದಲ್ಲಿದ್ದಾರೆ. 7ನೇ ಅಭ್ಯರ್ಥಿಯ ಗೆಲುವು ಯಾರಿಗೆ ಸಿಗಲಿದೆ ಎಂಬುದು ಈಗ ಕುತೂಹಲ ಮೂಡಿಸಿದೆ.

# ಉಡಮಗಲ ಖಾನಾಪೂರ ಪ್ರೌಢಶಾಲೆಯಲ್ಲಿ ಎಸ್. ಐ .ಆರ್ ಕಾರ್ಯಕ್ರಮ

ನೆಲೆಸಿದವರು ಹೆಸರು ಮತದಾರ ಪಟ್ಟಿಯಲ್ಲಿ ಸೇರಿಸಬಾರದು ಎಸ್.ಐ.ಆರ್‌ನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರಜಾಪ್ರಭುತ್ವವನ್ನು ಬಲಪಡಿಸಿ ಎಸ್ಐಆರ್ ಕಾರ್ಯಕ್ರಮಕ್ಕೆ ಬಂದಂತ ಬಿಎಲ್‌ಓ ಅವರಿಗೆ ಪ್ರತಿಯೊಬ್ಬ ಮನೆಯವರು ಸಹಕರಿಸಿ ಅವರ ಕೇಳಿದ ಮಾಹಿತಿಯನ್ನು ಕೊಟ್ಟು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕರೆ ನೀಡಿದರು .ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿ ಶಾಂತಪ್ಪ ಹಾಗೂ ಗ್ರಾಮ ಪಂಚಾಯತಿಯ ಸಿಬ್ಬಂದಿಯವರು ಶಾಲೆಯ ಶಿಕ್ಷಕರ ವೃಂದ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು

# ಮತ ಚೀಟಿ ಇದ್ದವರಿಗೆ ಮಾತ್ರ ಗ್ಯಾರಂಟಿ: ಡಿಕೆಶಿ

ಯೋಜನೆಗಳ ಕುರಿತು ವಿರೋಧ ಪಕ್ಷಗಳ ಟೀಕೆಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದರು.ಗ್ಯಾರಂಟಿ ಹಣ ದುರುಪಯೋಗವಾಗುತ್ತಿರುವ ಬಗ್ಗೆ ಜಾಗೃತಿ ವಹಿಸಲಾಗುತ್ತಿದೆ ಎಂದರು. "ಆರಂಭದಲ್ಲಿ ತರಾತುರಿಯಲ್ಲಿ ಅರ್ಜಿ ಸಲ್ಲಿಸುವಾಗ ಯಾರದ್ದೋ ಮೊಬೈಲ್ ನಂಬರ್, ದಾಖಲೆ ನೀಡಿದ್ದರಿಂದ ಹಣ ಬೇರೆಯವರ ಖಾತೆಗೆ ಜಮೆಯಾಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಈಗ ನಮ್ಮ ಬಳಿ ಸೂಕ್ತ ದಾಖಲೆಗಳಿವೆ. ಗ್ಯಾರಂಟಿ ತಲುಪಲು ಫೋಟೋ ಐಡೆಂಟಿಫಿಕೇಷನ್ ಹಾಗೂ ಸೂಕ್ತ ದಾಖಲೆ ಬೇಕು. ನಾವು ಕರ್ನಾಟಕದವರಿಗೆ ಮಾತ್ರ ಯೋಜನೆ ನೀಡುತ್ತೇವೆ. ಇಲ್ಲಿ ವೋಟ್ (ಮತದಾನದ ಹಕ್ಕು) ಇದ್ದವರಿಗೆ ಮಾತ್ರ ಗ್ಯಾರಂಟಿ ಸಿಗಲಿದೆ" ಎಂದು ಮಹತ್ವದ ಹೇಳಿಕೆ ನೀಡಿದರು.

ಜೆಡಿಎಸ್ ಕೈಗೊಂಡಿರುವ ಪಾದಯಾತ್ರೆ ಕುರಿತು ಪ್ರತಿಕ್ರಿಯಿಸಿದ ಸಿಎಂ, ಬಿಡದಿ ಟೌನ್‌ಶಿಪ್ ಯೋಜನೆ ತಂದಿದ್ದು ನಾನಲ್ಲ ಎಂದು ಸ್ಪಷ್ಟನೆ ನೀಡಿದರು.
ಮಹಾರಾಷ್ಟ್ರದಲ್ಲಿ 80 ಸಾವಿರ ಎಕರೆ ಹಾಗೂ ತೆಲಂಗಾಣದಲ್ಲಿ 40 ಸಾವಿರ ಎಕರೆ ಭೂಸ್ವಾಧೀನ ಮಾಡಿ ಟೌನ್‌ಶಿಪ್ ನಿರ್ಮಿಸಲಾಗಿದೆ. ಬಿಡದಿಯಲ್ಲಿ ನಾನು ಟೌನ್‌ಶಿಪ್ ಮಾಡುತ್ತಿಲ್ಲ. ಹಿಂದೆ ಕುಮಾರಸ್ವಾಮಿ ಅವರ ಅವಧಿಯಲ್ಲೇ ಈ ಟೌನ್‌ಶಿಪ್ ಘೋಷಣೆಯಾಗಿತ್ತು. ಅಷ್ಟೇ ಅಲ್ಲದೆ, ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಏಚಂಆಃ ಗೆ 1 ಸಾವಿರ ಎಕರೆ ಭೂಮಿ ಕೊಟ್ಟಿದ್ದರಲ್ಲಾ, ಆಗ ರೈತರ ಜಮೀನು ಹೋಗಿರಲಿಲ್ಲವೇ ಅವರು ಕೇವಲ ರಾಜಕಾರಣ ಮಾಡುತ್ತಿದ್ದಾರೆ, ಮಾಡಲಿ" ಎಂದು ಡಿ.ಕೆ. ಶಿವಕುಮಾರ್ ವಾಗ್ದಾಳಿ ನಡೆಸಿದರು.
ನಮ್ಮ ಸ್ನೇಹಿತ ಹಾಗೂ ಶಾಸಕ ಇಕ್ಬಾಲ್ ಹುಸೇನ್ ಅವರಿಗೆ ಎಡಗೈ ಹಾಗೂ ಎದೆಯ ಭಾಗದಲ್ಲಿ ಲಘು ನೋವು ಕಾಣಿಸಿಕೊಂಡ ತಕ್ಷಣವೇ ವೈದ್ಯರ ಬಳಿ ಕರೆತರಲಾಗಿದೆ. ಸದ್ಯ ಅವರು ಆರೋಗ್ಯವಾಗಿದ್ದು, ವೈದ್ಯರು ತಪಾಸಣೆ ನಡೆಸಿದ್ದಾರೆ. ಯಾರೂ ಗಾಬರಿಯಾಗಬೇಕಾಗಿಲ್ಲ. ವೀಕೆಂಡ್ ಮುಗಿದ ನಂತರ ಅವರು ಫೋರ್ಟಿಸ್ ಆಸ್ಪತ್ರೆಯಲ್ಲಿ ಮುಂದಿನ ಚಿಕಿತ್ಸೆ ಪಡೆಯಲಿದ್ದಾರೆ. ನಾನು ಈಗಾಗಲೇ ವೈದ್ಯರೊಂದಿಗೆ ಮಾತನಾಡಿದ್ದು, ಆತಂಕ ಪಡುವಂತಹದ್ದು ಏನೂ ಇಲ್ಲ" ಎಂದು ಸಿಎಂ ಸ್ಪಷ್ಟಪಡಿಸಿದರು

# ವಿದ್ಯಾರ್ಥಿಗಳು ಸಮಾಜದ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಿ :ಆಂಜನೇಯ ನಸಲಾಪುರ




ಧೈರ್ಯದ ದಾರಿ

**ಮಾನ್ವಿ :** ಹಾಸ್ಟೆಲ್ ಜೀವನ ಎನ್ನುವುದು ವಿದ್ಯಾರ್ಥಿಗಳಿಗೆ ಸ್ವಾವಲಂಬನೆ ಮತ್ತು ಶಿಸ್ತನ್ನು ವಿದ್ಯಾರ್ಥಿಗಳು ಕಲಿಸುವ ದೊಡ್ಡ ಪಾಠಶಾಲೆ. ಮನೆಯಿಂದ ದೂರವಿದ್ದರೂ ಎಲ್ಲರೂ ಒಂದೇ ಸಮಾಜದ ಉತ್ತಮ ಕುಟುಂಬದಂತೆ ಬಾಳಿ, ಇಂದು ಉನ್ನತ ಶಿಕ್ಷಣ ಮುಗಿಸಿ ಹೊರಡುತ್ತಿರುವ ವಿದ್ಯಾರ್ಥಿಗಳು ಸಮಾಜದ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಬೇಕು," ಎಂದು ಆಂಜನೇಯ ನಸಲಾಪುರ ತಿಳಿಸಿದರು.ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿಗಳ ವಸತಿ ನಿಲಯದಲ್ಲಿ ಬಿ.ಎ. ಬಿ.ಕಾಂ ಮತ್ತು ಬಿ.ಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮವನ್ನು ಸಮಾರಂಭ ಹಮ್ಮಿಕೊಳ್ಳಲಾಯಿತು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಇಂದಿನ ಯುವಕರಲ್ಲಿ ನೈತಿಕ ಮೌಲ್ಯಗಳು ಕಾಣದಾಗಿವೆ. ವಿದ್ಯಾರ್ಥಿಗಳಲ್ಲಿ ಶಾಂತಿ ಸೌಹಾರ್ದತೆ, ಭ್ರಾತೃತ್ವ ಮನೋಭಾವನೆಗಳನ್ನು ಬೆಳಸಿಕೊಳ್ಳಬೇಕು ವಸತಿ ನಿಲಯದಲ್ಲಿರುವ ಅನೇಕ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಉತ್ತಮವಾದ ಜ್ಞಾನವನ್ನು ಪಡೆದು ಕೊಳ್ಳಬೇಕು. ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ಕಳೆದ ದಿನಗಳು ಮರೆಯಲಾಗದು.ಇಲ್ಲಿ ಕಲಿತ ಮೌಲ್ಯಗಳು ನಿಮ್ಮ ಭವಿಷ್ಯದ ಸಾಧನೆಗೆ ದಾರಿದೀಪವಾಗಲಿ ಎಂದು ಹೇಳಿದರು.ಮುಖ್ಯ ಅತಿಥಿಗಳಾಗಿ ಆಗಿಮಿಸಿದ ಸಹಾಯಕ ಆಯುಕ್ತರು ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳಾದ ಚಂದ್ರಶೇಖರ ಮಾತನಾಡಿ ವಿದ್ಯಾರ್ಥಿಯ ಜೀವನ ಅತ್ಯಮೂಲ್ಯವಾದದ್ದು ಅದನ್ನು ಸರಿಯಾಗಿ ಸದುಪಯೋಗಪಡಿಸಿಕೊಂಡಾಗ ಜೀವನ ಸಾರ್ಥಕವಾಗುತ್ತದೆ. ತಂದೆ ತಾಯಿಗಳ ಕನಸನ್ನ ನನಸು ಮಾಡಬೇಕು. ಸಾಮಾನ್ಯರೇ ಅಸಾಮಾನ್ಯರಾಗಿ ಉನ್ನತವಾದ ಸ್ಥಾನಗಳನ್ನು ಪಡೆದುಕೊಂಡಿದ್ದಾರೆ. ಮೂರ್ಖನಿಗಿಂತ ಅತಿ ಮೂರ್ಖನೇ ಮುಂದೆ ಅತಿ ದೊಡ್ಡ ವ್ಯಕ್ತಿಯಾಗಿದ್ದಾರೆ. ಅನೇಕ ಸಾಧಕರ ಜೀವನ ಬಗ್ಗೆ ತಿಳಿಸಿ ವಿದ್ಯಾರ್ಥಿಗಳು ಆದರ್ಶ ವ್ಯಕ್ತಿಗಳ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಪರಿಶಿಷ್ಟ ಪಂಗಡದ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳಾದ ಭಾಗಯ್ಯ ನಾಯಕ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿ ಜೀವನದ ಅತ್ಯಂತ ಪ್ರಮುಖ ಘಟ್ಟವನ್ನು ಯಶಸ್ವಿಯಾಗಿ ಮುಗಿಸಿರುವ ನೀವು, ಭವಿಷ್ಯದಲ್ಲಿ ದೇಶದ ಜವಾಬ್ದಾರಿಯುತ ಪ್ರಜೆಗಳಾಗಬೇಕು. ಹಾಸ್ಟೆಲ್ ಅಲ್ಲಿ ಕಲಿತ ಶಿಸ್ತು ಮತ್ತು ಮೌಲ್ಯಗಳನ್ನು ಜೀವನದುದ್ದಕ್ಕೂ ಅಳವಡಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಹಿತನುಡಿಗಳನ್ನಾಡಿ ಶುಭ ಹಾರೈಸಿದರು. ಕಾರ್ಯಕ್ರಮದ ಪ್ರಸ್ತಾವಿಕವಾಗಿ ವಸತಿ ನಿಲಯ ಮೇಲ್ವಿಚಾರಾದ ಅಮರೇಶ ಮಾತನಾಡಿ, ಪದವಿ ಮುಗಿಯುವುದು ಶಿಕ್ಷಣದ ಅಂತ್ಯವಲ್ಲ, ಇದು ನಿಮ್ಮ ಮುಂದಿನ ಸಾಧನೆಯ ಹಾದಿಯ ಆರಂಭ. ಕಠಿಣ ಪರಿಶ್ರಮ ಮತ್ತು ಸತತ ಪ್ರಯತ್ನದಿಂದ ಮಾತ್ರ ಯಶಸ್ಸು ಸಾಧ್ಯ ಎಂದು ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬಿದರು.

ಇದೇ ಸಂದರ್ಭದಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳು ಹಾಸ್ಟೆಲ್ ಅಲ್ಲಿ ಕಳೆದ ತಮ್ಮ ಮಧುರ ನೆನಪುಗಳನ್ನು ಹಂಚಿಕೊಳ್ಳುತ್ತಾ ಭಾವುಕರಾದರು. ಕಿರಿಯ ವಿದ್ಯಾರ್ಥಿಗಳು ತಮ್ಮ ಹಿರಿಯ ಸಹಪಾಠಿಗಳಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ತದನಂತರ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರದರ್ಶನಗೊಂಡು ಎಲ್ಲರ ಮನರಂಜಿಸಿದವು. ಕಾರ್ಯಕ್ರಮದಲ್ಲಿ ಹುಸೇನ್ ಬಡಿಗೇರ ವಸತಿ ನಿಲಯ ಮೇಲ್ವಿಚಾರಕರು, ಶ್ರೀನಿವಾಸ್ ವಸತಿ ನಿಲಯ ಮೇಲ್ವಿಚಾರಕರು ಹಾಸ್ಟೆಲ್ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿದ್ಯಾರ್ಥಿ ವಿರೇಶ ಕಾರ್ಯಕ್ರಮ ನಿರೂಪಿಸಿದರು, ಶಿವಕುಮಾರ ಸ್ವಾಗತಿಸಿದರು ರಂಗನಾಥ ವಂದಿಸಿದರು.

# ವಯೋ ನಿವೃತ್ತಿ ಹೊಂದಿದ ಶಿವಲಿಂಗಮ್ಮ ಕಟ್ಟಿಮನಿ ರವರಿಗೆ ಸನ್ಮಾನ



ಧೈರ್ಯದ ದಾರಿ

**ಮಾನ್ವಿ:** ತಾಲೂಕಿನ ನೀರಮಾನ್ವಿ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ನೀರಮಾನ್ವಿ ಕ್ರಾಸ್ ಶಾಲೆಯಲ್ಲಿ ಶಾಲಾ ಸುಧಾರಣೆ ಸಮಿತಿ ಹಾಗೂ ಶಾಲೆಯ ಶಿಕ್ಷಕರಿಂದ ಸನ್ಮಾನವನ್ನು ಸ್ವೀಕರಿಸಿ ಶಾಲೆಯಲ್ಲಿ ಹಿರಿಯ ಮುಖ್ಯಗುರುಗಳಾಗಿ ಸೇವೆ ಸಲ್ಲಿಸಿ ವಯೋ ನಿವೃತ್ತಿ ಹೊಂದಿದ ಶಿವಲಿಂಗಮ್ಮಕಟ್ಟಿಮನಿ ಮಾತನಾಡಿ ಶಿಕ್ಷಕಿಯಾಗಿ ಗ್ರಾಮೀಣ ಭಾಗದ ಸರಕಾರಿ ಶಾಲೆಗೆ ಹೆಚ್ಚಾಗಿ ಆರ್ಥಿಕವಾಗಿ ಅತ್ಯಂತ ಹಿಂದುಳಿದಿರುವ ಮುಗ್ದಮಕ್ಕಳಿಗೆ ಶಿಕ್ಷಣವನ್ನು ನೀಡಿ ಜೀವನವನ್ನು ರೂಪಿಸುವ ಅವಕಾಶ ನನಗೆ ದೊರೆತಿರುವುದು ಹೆಚ್ಚಿನ ಖುಷಿಯನ್ನು ನೀಡಿದೆ ಎಂದು ತಿಳಿಸಿದರು.
ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಹಿರಿಯ ಮುಖಂಡರಾದ ಬಾಲಸ್ವಾಮಿಕೊಡ್ಲಿ ಮಾತನಾಡಿ ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದ ವೃತ್ತಿಯಾಗಿದು ದೇಶದ ಮುಂದಿನ ಪಿಳಿಗೆಯನ್ನು ನಿರ್ಮಾಣ ಮಾಡುವ ಮಹಾತ್ತರವಾದ ಜವಾಬ್ದಾರಿ ಶಿಕ್ಷಕರ ಮೇಲೆ ಇದೆ ಶಿವಲಿಂಗಮ್ಮಕಟ್ಟಿಮನಿ ರವರು 33 ವರ್ಷಗಳ ಶಿಕ್ಷಕರಾಗಿ ಹಿರಿಯ ಮುಖ್ಯಗುರುಗಳಾಗಿ ಸೇವೆಯನ್ನು ಸಲ್ಲಿಸುವ ಮೂಲಕ ಸಾವಿರಾರು ಮಕ್ಕಳಿಗೆ ವಿದ್ಯಾದಾನವನ್ನು ಮಾಡುವ ಮೂಲಕ ವಿದ್ಯಾರ್ಥಿಗಳ ಜೀವನವನ್ನು ರೂಪಿಸಿಕೊಳ್ಳುವುದಕ್ಕೆ ನೆರವಾಗಿದ್ದಾರೆ ಎಂದು ತಿಳಿಸಿದರು.
ಕಾರ್ಯಕ್ರಮದಲ್ಲಿ ಮೂಕ್ಕಪ್ಪ ಕಟ್ಟಿಮನಿ ಹಾಗೂ ಶಿವಲಿಂಗಮ್ಮಕಟ್ಟಿಮನಿ ಶಿಕ್ಷಕ ದಂಪತಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು
ಕಾರ್ಯಕ್ರಮದಲ್ಲಿ ಮಾಜಿ ಕ.ಸಾ.ಪ.ತಾ.ಅಧ್ಯಕ್ಷರಾದ ಮೂಕ್ಕಪ್ಪ ಕಟ್ಟಿಮನಿ,ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರಾದ ಸುರೇಶಕುರ್ಡಿ,ತಾ.ಅಧ್ಯಕ್ಷರಾದ ಸಬ್ಜಲಿ, ಸಿರವಾರ ತಾ.ಅಧ್ಯಕ್ಷರಾದ ಮೌನೇಶ ಹಣಗಿ, ಮುಖ್ಯಗುರು ಮಹೇಶ,ನಿವೃತ್ತ ಮುಖ್ಯಗುರುಗಳಾದ ಶ್ರೀಶೈಲಗೌಡ,ರೇವಣಸಿದ್ದಯ್ಯಸ್ವಾಮಿ, ಹಿರಿಯ ಸಾಹಿತಿ ತಾಯಿರಾಜ್ ಮರ್ಚೆಟಾಳ್, ರಾಮಲಿಂಗಪ್ಪ,ಆರಿಫ್ ಮಿಯಾ, ಸೇರಿದಂತೆ ಶಾಲಾಸುಧಾರಣಾ ಸಮಿತಿಯ ಪದಾಧಿಕಾರಿಗಳು, ಪಾಲಕರು,ಶಿಕ್ಷಕರು,ವಿದ್ಯಾರ್ಥಿಗಳು ಭಾಗವಹಿಸಿದರು

# ಯೋಗವನ್ನು ಕಲಿಯಿರಿ ಆರೋಗ್ಯವಂತರಾಗಿರಿ_ ಬಿಕೆ ಸ್ಮಿತಾ ಅಕ್ಕ




ಧೈರ್ಯದ ದಾರಿ

ಪ್ರತಿವರ್ಷದಂತೆ ಈ ವರ್ಷ ಜೂನ್ 21ರಂದು ಯೋಗ ದಿನಾಚರಣೆಯನ್ನು ಆಚರಣೆ ಮಾಡಲಾಗುತ್ತದೆ.ಈ ಹಿನ್ನೆಲೆಯಲ್ಲಿ ಜಿಲ್ಲಾ ಆಯುಷ್ ಇಲಾಖೆಯ ವೈದ್ಯರು ಇಂದು ನಮ್ಮ ಕೇಂದ್ರಕ್ಕೆ ಬಂದು ಯೋಗ ಕುರಿತು ಮಾಹಿತಿಯನ್ನು ನೀಡುತ್ತಾರೆ .ಜೊತೆಗೆ ಯೋಗಾಭ್ಯಾಸದ ಬಗ್ಗೆ ಮಾತನಾಡುತ್ತಾರೆ. ಯೋಗದ ಆಸನಗಳ ಕುರಿತು ನಮ್ಮ ಮುಂದೆ ಪ್ರಾತ್ಯಕ್ಷಿತವಾಗಿ ಮಾಡುತ್ತಾರೆ. ಪ್ರತಿಯೊಬ್ಬರು ದಿನನಿತ್ಯ ಯೋಗವನ್ನು ಮಾಡಬೇಕು ಯೋಗದಿಂದ ಮಾನಸಿಕ ಶಕ್ತಿ ಬರುತ್ತದೆ . ಯುಗ ರೋಗವನ್ನು ದೂರ ಮಾಡುತ್ತದೆ .ಯೋಗ ಮನುಷ್ಯನ ಆರೋಗ್ಯದ ಸೋಪಾನ. ಶಾರೀರಿಕ ಮಾನಸಿಕ ಆರೋಗ್ಯಕ್ಕೆ ಯೋಗಭ್ಯಾಸ ಒಳ್ಳೆಯದು. ಯೋಗವನ್ನು ಕಲಿಯಿರಿ ಆರೋಗ್ಯವಂತ ಆರೋಗ್ಯವಂತವಾಗಿರಿ ಎಂದು ದಿನಾಂಕ 14 06.2026ರಂದು ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಜಿಲ್ಲಾ ಆಯುಷ್ ಇಲಾಖೆ ಹಾಗೂ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯ ಇವರ ಆಶ್ರಯದಲ್ಲಿ ನಡೆದ ಯೋಗ ಕುರಿತು ಕಾರ್ಯಾಗರದಲ್ಲಿ ರಾಜಯೋಗಿನಿ ಬಿ.ಕೆ ಸ್ಮಿತಾ ಅಕ್ಕನವರು ಹಸಿಗೆ ನೀರಾಕುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯದರ್ಶಿ ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಶಿಕ್ಷಣ ವಿಭಾಗದ ಜಿಲ್ಲಾ ಸಂಚಾಲಕರಾದ ಡಾ .ದಂಡಪ್ಪ ಬಿರಾದಾರ ಮಾತನಾಡುತ್ತಾ. ಮನೋ ನಿಗ್ರಕೆ ಯೋಗ ಸಾಧನೆ ನೀಡುತ್ತದೆ,. ಮನುಷ್ಯನಲ್ಲಿರುವ ಜಡತ್ವವನ್ನು ನಿವಾರಣೆ ಮಾಡುವ ಶಕ್ತಿ ಯೋಗಕೆ ಇದೆ. ಪ್ರತಿನಿತ್ಯ ಯೋಗ ಮಾಡಿ ನಿರೋಯಾಗಿರಿ ಯೋಗದ ಸಾಧನೆ ಅಭ್ಯಾಸ ಉದ್ಭವಿಗಕ್ಕೆ ಕೆಡುವಾಣ ಹಾಕುವ ಶಕ್ತಿ ಇದೆ, ಅಲಸ್ಯದಿಂದಲೇ ಜಡತ್ವ ಯೋಗದಿಂದಲೇ ಪಠತ್ವ ಎಂಬುದನ್ನ ಪ್ರತಿಯೊಬ್ಬರು ತಿಳಿದುಕೊಳ್ಳಬೇಕು .ಇಡೀ ಜಗತ್ತಿನಲ್ಲಿ ಯೋಗ ಭಾರತದಲ್ಲಿ ಜನಪ್ರಿಯನ್ನು ಪಡೆದಿದೆ .ವಿಶ್ವದ ನೂರಾರು ರಾಷ್ಟಗಳಲ್ಲಿ ಯೋಗಭ್ಯಾಸ ಮಾಡುತ್ತಿರುವುದು ಅದು ಭಾರತೀಯರ ಹೆಮ್ಮೆಪಡುವ ವಿಷಯವಾಗಿದೆ ಎಂದು ಹೇಳಿದರು

.ಈ ಕಾರ್ಯಕ್ರಮದಲ್ಲಿ ಜಿಲ್ಲಾ ಅಯುಷ ಇಲಾಖೆಯ ಡಾಕ್ಟರ್ ಪೂಜಾ ಯೋಗಾಭ್ಯಾಸದ ಮಹತ್ವ ಯೋಗ ದಿನಾಚರಣೆ ಹಿನ್ನೆಲೆ ಹಾಕಿಕೊಂಡ ಕಾರ್ಯಕ್ರಮಗಳು ಕುರಿತು ಮಾತನಾಡಿದರು. ತಿಮ್ಮಪ್ಪ ವಡ್ಡೆಪಲ್ಲಿ ಯೋಗ ಶಿಕ್ಷಕರು ಯೋಗದ ವಿವಿಧ ಆಸನಗಳ ಕುರಿತು ಪ್ರಾತ್ಯಕ್ಷಿತ ನೀಡಿದರು. ಈ ಸಂದರ್ಭದಲ್ಲಿ ಶಾರದಕ್ಕ ಡಾ ನವೀನ್ ಕುಮಾರ್ ಹಾಗೂ ಪಿ ಸುರೇಖಾ ಹಾಗೂ ಜಿಲ್ಲಾ ಆಯುಷ ಇಲಾಖೆಯ ಸಿಬ್ಬಂದಿಯವರು ಪ್ರಜಾಪಿತ ಬ್ರಹ್ಮಕುಮಾರಿ ಸಂಸ್ಥೆಯ ಹಲವಾರು ಸ್ವಯಂಸೇವಕರು ಇದರಲ್ಲಿ ಪಾಲ್ಗೊಂಡಿದ್ದರು.

# ಹತ್ತಿ ನಾಟಿ ಯಂತ್ರದಿಂದ ದುಬಾರಿ ಕೂಲಿಕಾರರ ಸಮಸ್ಯೆ ತಪ್ಪಿಸಿ: ಪ್ರಕಾಶ್ ಚೌಹಾಣ್

ಧೈರ್ಯದ ದಾರಿ




**ರಾಯಚೂರು ಜೂನ್ 15:** ಹತ್ತಿ ನಾಟಿ ಯಂತ್ರಗಳು ಹತ್ತಿ ಬೀಜಗಳನ್ನು ನಿಖರವಾದ ಆಳ ಮತ್ತು ಸಾಲುಗಳಲ್ಲಿ ಬಿತ್ತನೆ ಮಾಡಲು ಬಳಸುವ ಅತ್ಯುತ್ತಮ ಕೃಷಿ ಸಾಧನಗಳಾಗಿವೆ. ಇವು ದುಬಾರಿ ಕೂಲಿಕಾರರ ಸಮಸ್ಯೆಯನ್ನು ತಪ್ಪಿಸಿ, ಬೀಜದಿಂದ ಬೀಜಕ್ಕೆ ಹಾಗೂ ಸಾಲಿನಿಂದ ಸಾಲಿಗೆ ಸರಿಯಾದ ಅಂತರವನ್ನು ಕಾಯ್ದುಕೊಳ್ಳಲು ನೆರವಾಗುತ್ತವೆ ಎಂದರು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಪ್ರಕಾಶ್ ಚೌಹಾಣ್ ಅವರು ಹೇಳಿದರು.
ಜೂನ್ 15ರ ಸೋಮವಾರ ದಂದು ರಾಯಚೂರು ತಾಲೂಕಿನ ಮಿಟಿಮಲ್ಕಾಪುರ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಹತ್ತಿ ಉತ್ಪಾದಕತೆ ಮಿಷನ್ ಯೋಜನೆಯ ಕ್ಷೇತ್ರ ಪ್ರಾತ್ಯಕ್ಷಿಕೆಗೆ ಚಾಲನೆ ನೀಡಿ ಅವರು ಮಾತನಾಡಿದರು.
ಕೇಂದ್ರ ಸರ್ಕಾರವು 5,659 ಕೋಟಿ ರೂ. ವೆಚ್ಚದಲ್ಲಿ ಹತ್ತಿ ಉತ್ಪಾದಕತೆ ಮಿಷನ್ ಯೋಜನೆಯನ್ನು ಜಾರಿಗೊಳಿಸಿದೆ. ಯೋಜನೆಯು 2026ರಿಂದ 31ರವರೆಗೆ ಮಹತ್ವಾಕಾಂಕ್ಷೆಯ ಯೋಜನೆಯು ಹತ್ತಿ ಇಳುವರಿ ಹೆಚ್ಚಿಸಲು ಮತ್ತು ರೈತರ ಆದಾಯವನ್ನು ವೃದ್ಧಿಸಲು ವೈಜ್ಞಾನಿಕ ಹಾಗೂ ತಾಂತ್ರಿಕ ಬೆಂಬಲವನ್ನು ಒದಗಿಸುತ್ತದೆ ಎಂದರು. 2031ರ ವೇಳೆಗೆ ಹತ್ತಿ ಉತ್ಪಾದಕತೆಯನ್ನು ಪ್ರತಿ ಹೆಕ್ಟೇರ್‌ಗೆ 440 ಕೆ.ಜಿ ಯಿಂದ 755 ಕೆ.ಜಿ.ಗೆ ಹೆಚ್ಚಿಸುವುದು. ಹೆಚ್ಚಿನ ಇಳುವರಿ ನೀಡುವ, ಹವಾಮಾನ ವೈಪರೀತ್ಯ ಮತ್ತು ಕೀಟಗಳನ್ನು ತಡೆದುಕೊಳ್ಳ ಬಲ್ಲ ಬೀಜಗಳ ಅಭಿವೃದ್ಧಿ, ದಾರಗಳು ಉದ್ದವಾಗಿರುವ ಮತ್ತು ಬಲವಾಗಿರುವ ಹತ್ತಿ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡುವ ಮೂಲಕ ದೇಶದ 14 ರಾಜ್ಯಗಳ 140 ಜಿಲ್ಲೆಗಳ ಸುಮಾರು 32 ಲಕ್ಷ ರೈತರಿಗೆ ತರಬೇತಿ ಮತ್ತು ಆಧುನಿಕ ಕೃಷಿ ತಂತ್ರಜ್ಞಾನಗಳ ಮೂಲಕ ನೆರವು ನೀಡಲಾಗುತ್ತದೆ ಎಂದರು.
ಹತ್ತಿ ಬೆಳೆಯ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಮಿಷನ್ ಹತ್ತಿ ಯೋಜನೆಯನ್ನು 2026–27 ಸಾಲಿನಲ್ಲಿ ಜಾರಿಗೊಳಿಸಲಾಗಿದೆ. ಈ ಯೋಜನೆಯಡಿ ಹತ್ತಿ ಬೆಳೆಯನ್ನು ಅಧಿಕ ಸಾಂದ್ರತೆ ಪದ್ಧತಿಯಲ್ಲಿ ನಾಟಿ ಮಾಡಬೇಕು. ಸಾಲಿನಿಂದ ಸಾಲಿಗೆ 90 ಸೇ.ಮಿ ಅಂತರ ಗಿಡ ದಿಂದ ಗಿಡ್ಡಕ್ಕೆ 15 ಸೇ.ಮಿ ಅಂತರ ಕಾಪಾಡಬೇಕು. ಈ ಅಂತರ ಮಟ್ಟವನ್ನು ಅತ್ಯಂತ ನಿಖರತೆಯಿಂದ ನಾಟಿ ಮಾಡುವಲ್ಲಿ ಈ ಹೊಸ ಉಪಕರಣ ವಾದ ವಾಯು ಚಾಲಿತ ಬಿತ್ತನೆ ಯಂತ್ರದ ಮೂಲಕ ನಾಟಿ ಮಾಡಬಹುದಾಗಿದೆ ಎಂದರು.
ಇದೇ ಸಂದರ್ಭದಲ್ಲಿ ರಾಯಚೂರು ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕಿ ದೀಪ ಎಲ್., ಕೃಷಿ ವಿಜ್ಞಾನಿ ಡಾ.ಭೀಮಣ್ಣ, ಐಎಟಿ ಸಂಸ್ಥೆಯ ಆರ್.ಎ.ಪಾಟೀಲ್, ಪ್ರಗತಿ ಪರ ರೈತ ಸಿದ್ದನಗೌಡ ಸೇರಿದಂತೆ ಕೃಷಿ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ರೈತರು ಇದ್ದರು.

# ಎಂ.ಪಿ.ಪ್ರಕಾಶ್ ನಗರದ ಕೊಲೆ ಪ್ರಕರಣ ಪ್ರೀತಿಗೆ ಅಡ್ಡಿಯಾದನೆಂದು ಅಟ್ಟಾಡಿಸಿ ಕೊಂದ ಕಿರಾತಕರು



**ಹೊಸಪೇಟೆ.ಜೂ.15:** ಸ್ಥಳೀಯ ಎಂ.ಪಿ.ಪ್ರಕಾಶ ನಗರದ ಕೆ.ಎನ್.ಎ. ಎಂಟರ್ ಪ್ರೈಸಸ್ ಅಂಗಡಿ ಮುಂದಿನ ಮುಖ್ಯ ರಸ್ತೆಯಲ್ಲಿ ಶನಿವಾರ ರಾತ್ರಿ ಜರುಗಿದ ವ್ಯಕ್ತಿಯ ಬರ್ಭರ ಕೊಲೆಗೆ ಕಾರಣ ಪ್ರೀತಿ ಎನ್ನುವುದು ತಿಳಿದು ಬಂದಿದೆ.

ಕೊಲೆಯಾದ ಮಹಮದ್ ಯೂನೂಸ್ ನ ಹೆಂಡತಿಯ ತಂಗಿಯನ್ನು ಕೊಲೆ ಆರೋಪಿ ಚಿತ್ತವಾಡ್ಗಿಯ ಬಣಗಾರ ಓಣಿ ನಿವಾಸಿ ಖಾಜಾ(30) ಪ್ರೀತಿಸುತ್ತಿದ್ದ ಎನ್ನಲಾಗಿದೆ. ಅದರೆ ಇದಕ್ಕೆ ಮೃತ ಮಹಮದ್ ಯೂನೂಸ್ ಒಪ್ಪಿರಲಿಲ್ಲ ಎಂದು ತಿಳಿದು ಬಂದಿದೆ. ಅಲ್ಲದೆ ಆರೋಪಿ ಖಾಜಾ ಗೆ ಸರಿಯಾಗಿ ದುಡಿಯುವುದಿಲ್ಲ, ನಿನಗೆ ಹೀಳಿಕೊಳ್ಳುವಂತಹ ಕೆಲಸವಿಲ್ಲ. ಹಾಗಾಗಿ ತನ್ನ ಹೆಂಡತಿಯ ತಂಗಿಯನ್ನು ಮದುವೆ ಮಾಡಿ ಕೊಡುವುದಿಲ್ಲ ಅಂತ ಹೇಳಿ ಕಳುಹಿಸಿದ್ದ ಎನ್ನಲಾಗಿದೆ.

ಅಲ್ಲದೆ ಮೃತ ಮಹಮದ್ ಯೂನೂಸ್ ತನ್ನ ಹೆಂಡತಿಯ ತಂಗಿ ಜಿಯಾಳಿಗೆ ಬೇರೆ ಕಡೆ ಸಂಬಂಧ ಹುಡುಕಿ ಮದುವೆ ಕೂಡ ನಿಗಧಿ ಮಾಡಿದ್ದ. ಅದರ ಭಾಗವಾಗಿ ಭಾನುವಾರ ಜಿಯಾ ಳ ನಿಶ್ಚಿತಾರ್ಥ ಕೂಡ ನಿಗಧಿಯಾಗಿತ್ತು.

ತನ್ನ ಪ್ರೀತಿಗೆ ಅಡ್ಡಿಪಡಿಸಿದ್ದು ಅಲ್ಲದೆ, ಬೇರೆ ವ್ಯಕ್ತಿಯೊಂದಿಗೆ ಭಾನುವಾರವೇ ನಿಶ್ಚಿತಾರ್ಥ ನಿಗಧಿ ಮಾಡಿದ್ದರಿಂದ ಕುಪಿತಗೊಂಡ ಖಾಜಾ, ತನ್ನ ಸ್ನೇಹಿತ 7ನೇ ವಾರ್ಡಿನ ಪಾಂಡುರಂಗ ಕಾಲೋನಿ ನಿವಾಸಿ ಇರ್ಫಾನ್ @ ಮಹಮದ್ ಹುಸೇನ್(18) ಎಂಬುವಾತನೊಂದಿಗೆ ಸೇರಿಕೊಂಡು, ನಿಶ್ಚಿತಾರ್ಥದ ಹಿಂದಿನ ದಿನವಾದ ಶನಿವಾರ ರಾತ್ರಿ ಮಹಮದ್ ಯೂನೂಸ್ ಕೆಲಸ ಮುಗಿಸಿಕೊಂಡು ಮನೆಗೆ ಬರುವ ದಾರಿಯಲ್ಲಿ ಕಾದು ಕೊಂಡು ಕುಳಿತು, ಆತ ಬರುತ್ತಿದ್ದಂತೆ, ಎಂ.ಪಿ.ಪ್ರಕಾಶ ನಗರದ ಮುಖ್ಯ ರಸ್ತೆಯಲ್ಲಿ ಅಟ್ಟಾಡಿಸಿಕೊಂಡು ಹೋಗಿ ಕಣ್ಣಿಗೆ ಕಾರದಪುಡಿ ಎರಚಿ, ಇಬ್ಬರು ಚಾಕುವಿನಿಂದ ಚುಚ್ಚಿ, ಕತ್ತು ಕೊಯ್ದು, ಭೀಕರವಾಗಿ ಕೊಲೆ ಮಾಡಿ ಪರಾರಿ ಆಗಿದ್ದರು.

ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು. ಆರೋಪಿ ಖಾಜಾ ಹಾಗೂ ಇರ್ಫಾನ್ ರನ್ನು ವಶಕ್ಕೆ ಪಡೆದಿರುವ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಪ್ರೀತಿಸಿದ ವ್ಯಕ್ತಿಯೊಂದಿಗೆ ತನ್ನ ನಾದಿನಿಯನ್ನು ವಿವಾಹ ಮಾಡಿಕೊಡಲು ಒಪ್ಪದಿದ್ದಕ್ಕೆ ಮಹಮದ್ ಯೂನೂಸ್ ಭೀಕರವಾಗಿ ಕೊಲೆಯಾದರೆ, ತಾನೂ ಪ್ರೀತಿಸಿದ ಯುವತಿಯೊಂದಿಗೆ ವಿವಾಹವಾಗಲು ಅಡ್ಡಿಪಡಿಸಿದ ಎಂದು ಸಿಟ್ಟಿನ ಕೈಗೆ ಬುದ್ದಿಕೊಟ್ಟು, ಕೊಲೆ ಮಾಡಿದ ತಪ್ಪಿಗಾಗಿ ಖಾಜಾ ಹಾಗೂ ಆತನಿಗೆ ಸಹಾಯ ಮಾಡಿದ 2ನೇ ಆರೋಪಿ 18 ವರ್ಷದ ಯುವಕ ಇರ್ಫಾನ್ ಈಗ ಜೈಲು ಕಂಬಿ ಎಣಿಸುವಂತಾಗಿದೆ.

# ಹಿರಿಯರಿಗೆ ರಕ್ಷಣೆ, ಗೌರವ ನೀಡುವುದು ಅಗತ್ಯ



**ಕಲಬುರಗಿ:ಜೂ.15:** ಹಿರಿಯ ನಾಗರಿಕರು ಕುಟುಂಬ, ಸಮಾಜಕ್ಕೆ ಭಾರವಲ್ಲ. ಅವರು ಅನುಭಾವಿಗಳು. ಅವರ ಮಾರ್ಗದರ್ಶನ ಪಡೆದು ಮುನ್ನಡೆಯಬೇಕು. ಅವರಿಗೆ ದೈಹಿಕ, ಮಾನಸಿಕವಾಗಿ ತೊಂದರೆ ನೀಡದೆ, ರಕ್ಷಣೆ, ಗೌರವ ನೀಡಬೇಕು ಎಂದು ನಿವೃತ್ತ ಕೃಷಿ ಅಧಿಕಾರಿ, ಸಮಾಜ ಸೇವಕ ಶಿವಯೋಗೆಪ್ಪಾ ಎಸ್. ಬಿರಾದಾರ ಹೇಳಿದರು. ನಗರದ ನ್ಯೂ ಗೋವಾ ಹೋಟೆಲ್ ಎದುರುಗಡೆಯಿರುವ 'ಸಕ್ಸಸ್ ಕಂಪ್ಯೂಟರ್ ತರಬೇತಿ ಕೇಂದ್ರ'ದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ "ವಿಶ್ವ ಹಿರಿಯ ನಾಗರಿಕರ ಮೇಲಿನ ದೌರ್ಜನ್ಯ ವಿರೋಧಿ ದಿನಾಚರಣೆ"ಯನ್ನು ಉದ್ಘಾಟಿಸಿ, ಅವರು ಮಾತನಾಡುತ್ತಿದ್ದರು. ಉಪನ್ಯಾಸಕ ಹಾಗೂ ಬಳಗದ ಅಧ್ಯಕ್ಷ ಎಚ್.ಬಿ.ಪಾಟೀಲ್ ಮಾತನಾಡಿ, ಹಿರಿಯರ ಮೇಲಾಗುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟಿ, ಅವರಿಗೆ ಸುರಕ್ಷಿತ ವಾತಾವರಣ ಕಲ್ಪಿಸುವುದು ಮತ್ತು ಅವರ ಹಕ್ಕುಗಳ ಬಗ್ಗೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವುದು ಈ ದಿನಾಚರಣೆಯ ಮುಖ್ಯ ಉದ್ದೇಶವಾಗಿದೆ. ಹಿರಿಯರಿಗೆ ದೈಹಿಕ ಹಿಂಸೆ ನೀಡಿ ನೋವುಂಟು ಮಾಡುವುದು, ಮಾನಸಿಕ ಕಿರುಕುಳ ನೀಡುವುದು, ಅವರ ಪಿಂಚಣಿ, ಆಸ್ತಿ ಅಥವಾ ಹಣವನ್ನು ಬಲವಂತವಾಗಿ ಕಸಿದುಕೊಳ್ಳುವುದು, ಊಟ, ಬಟ್ಟೆ, ವೈದ್ಯಕೀಯ ಆರೈಕೆ ನೀಡದೆ ಕಡೆಗಣಿಸುವುದು ಪ್ರಸ್ತುತವಾಗಿ ಕಂಡುಬರುತ್ತಿದೆ ಎಂದರು.

ಭಾರತದಲ್ಲಿ ಹಿರಿಯರ ರಕ್ಷಣೆಗಾಗಿ 'ಹಿರಿಯ ನಾಗರಿಕರ ಮತ್ತು ಪಾಲಕರ ರಕ್ಷಣಾ ಕಾಯ್ದೆ–2007' ಜಾರಿಯಲ್ಲಿದೆ. ಇದರ ಅಡಿಯಲ್ಲಿ ಹಿರಿಯರು ತಮ್ಮ ಕುಟುಂಬದವರಿಂದ ದೌರ್ಜನ್ಯಕ್ಕೊಳಗಾದರೆ, ಉಚಿತವಾಗಿ ದೂರು ನೀಡಿ ಪರಿಹಾರ ಪಡೆಯಲು ಅವಕಾಶವಿದೆ. ಯಾವುದೇ ಹಿರಿಯ ನಾಗರಿಕರು ದೌರ್ಜನ್ಯ ಅಥವಾ ನಿರ್ಲಕ್ಷ್ಯವನ್ನು ಎದುರಿಸುತ್ತಿದ್ದರೆ, ಸಹಾಯಕ್ಕಾಗಿ ರಾಷ್ಟ್ರೀಯ ಹಿರಿಯ ನಾಗರಿಕರ ಸಹಾಯವಾಣಿ–14567 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಅಸ್ಲಾಂ ಶೇಖ್ ಹಾಗೂ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

# ಭೂ ಫಲವತ್ತತೆಗೆ ಸಾಂಪ್ರದಾಯಿಕ ಕೃಷಿ ಅಗತ್ಯ ಖೇತ್ ಬಚಾವೋ ಅಭಿಯಾನ




**ಕುರುಗೋಡು, ಜೂ.15:** 'ರೈತರನ್ನು ಸಾಂಪ್ರದಾಯಿಕ ಕೃಷಿಯತ್ತ ಕೊಂಡೊಯ್ಯುವ ಉದ್ದೇಶದಿಂದ ದೇಶವ್ಯಾಪಿ ಖೇತ್ ಬಚಾವೋ ಅಭಿಯಾನ ಹಮ್ಮಿಕೊಂಡಿದೆ' ಎಂದು ಜಿಲ್ಲಾ ಉಪ ಕೃಷಿ ನಿರ್ದೇಶಕ ಎಸ್.ಎನ್. ಮಂಜುನಾಥ ಹೇಳಿದರು.

ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಶನಿವಾರ ಆಯೋಜಿಸಿದ್ದ ಖೇತ್ ಬಚಾವೋ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

'ಕೃಷಿ ಇಲಾಖೆ, ಕೃಷಿಗೆ ಸಂಬಂಧಿಸಿದ ಸಂಘ, ಸಂಸ್ಥೆಗಳು, ಕೃಷಿ ವಿಜ್ಞಾನಿಗಳು ಅಭಿಯಾನದಲ್ಲಿ ಭಾಗವಹಿಸಲಿದ್ದಾರೆ. ಅಗತ್ಯಕ್ಕಿಂತ ಅಧಿಕ ಪ್ರಮಾಣದ ಕ್ರಿಮಿನಾಶಕ, ರಸಗೊಬ್ಬರ ಬಳಕೆಯಿಂದ ಭೂಮಿ ಮತ್ತು ಪರಿಸರದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಕುರಿತು ರೈತರಲ್ಲಿ ಜಾಗೃತಿ ಮೂಡಿಸಲಿದ್ದಾರೆ. ಮಣ್ಣಿನ ಫಲವತ್ತತೆ ರಕ್ಷಣೆ, ಸುಸ್ಥಿರ ಕೃಷಿ ಪದ್ಧತಿ ಕುರಿತು ಅರಿವು ಮೂಡಿಸಲಾಗುವುದು' ಎಂದರು.

ಸಹಾಯಕ ಕೃಷಿ ನಿರ್ದೇಶಕ ಗರ್ಜೆಪ್ಪ ಮಾತನಾಡಿ, 'ಜೂನ್ 1 ರಿಂದ ಆರಂಭಗೊಂಡಿರುವ ಅಭಿಯಾನ ಜೂನ್ 30ಕ್ಕೆ ಕೊನೆಗೊಳ್ಳಲಿದೆ' ಎಂದು ತಿಳಿಸಿದರು.

'ಅಭಿಯಾನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೃಷಿ ಇಲಾಖೆ ಮೂಲಕ ಜಾರಿಗೆ ತಂದಿರುವ ಪಿ.ಎಂ.ಕಿಸಾನ್, ಕಿಸಾನ್ ಕ್ರೆಡಿಟ್ ಕಾರ್ಡ್, ಕೃಷಿ ಭಾಗ್ಯ, ಕೃಷಿ ಸಿಂಚಾಯಿ, ಧನ ಧಾನ್ಯ ಯೋಜನೆ, ಮಣ್ಣು ಆರೋಗ್ಯ ಚೀಟಿ ಸೇರಿದಂತೆ ಹಲವಾರು ಯೋಜನೆಗಳ ಬಗ್ಗೆ ರೈತರಲ್ಲಿ ಇಲಾಖೆ ಅಧಿಕಾರಿಗಳು ಜಾಗೃತಿ ಮೂಡಿಸಲಿದ್ದಾರೆ. ರೈತರು ಅಭಿಯಾನದ ಸದುಪಯೋಗಪಡಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಭೆ ನಡೆಸಿ ಕೃಷಿ ವಿಜ್ಞಾನಿಗಳಿಂದ ರೈತರಿಗೆ ಸಲಹೆ ನೀಡಲಾಗುವುದು. ಕ್ರಿಮಿನಾಶಕ ಮತ್ತು ರಸಗೊಬ್ಬರ ಬಳಕೆಯ ಬದಲು ಸಾವಯವ ಗೊಬ್ಬರ ಬಳಕೆಯಿಂದಾಗುವ ಪ್ರಯೋಜನಗಳು, ಗುಣಮಟ್ಟದ ಬೀಜಗಳ ಆಯ್ಕೆ ಕುರಿತು ಮಾಹಿತಿ ನೀಡುವ ಮೂಲಕ ಹಂತ ಹಂತವಾಗಿ ಪರಿಸರ ಸ್ನೇಹಿ, ಸಾಂಪ್ರದಾಯಿಕ, ಸಾವಯವ ನೈಸರ್ಗಿಕ ಕೃಷಿಕಡೆಗೆ ರೈತರನ್ನು ಪರಿವರ್ತಿಸುವ ಕಾರ್ಯ ಅಭಿಯಾನದ ಮೂಲಕ ಮಾಡಲಾಗುವುದು ಎಂದರು.

ಹಗರಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ರವಿ, ನವೀನ್ ಕುಮಾರ್, ಕೃಷ್ಣಮೂರ್ತಿ, ಕೃಷಿ ಅಧಿಕಾರಿ ದೇವರಾಜ್, ಸಿಬ್ಬಂದಿ ಕವಿತಾ ಕುಮಾರಿ, ರೇಣುಕಾರಾಧ್ಯ, ಹನುಮಂತ ರೆಡ್ಡಿ ಮತ್ತು ಮಲ್ಲಪ್ಪ ಇದ್ದರು.

# ನಿಸ್ವಾರ್ಥ ಸೇವೆ ಹಾಗೂ ಮಾರ್ಗದರ್ಶನ ಮಾದರಿ



**ಸೈದಾಪುರ:ಜೂ.15:**ವರ್ಗಾವಣೆಗೊಂಡ ಶರಣಬಸಪ್ಪ ಮುಖ್ಯ ಶಿಕ್ಷಕರ ನಿಸ್ವಾರ್ಥ ಸೇವೆ ಹಾಗೂ ಮಾರ್ಗದರ್ಶನ ಇತರರಿಗೆ ಮಾದರಿಯಾಗಿದೆ ಎಂದು ಬಿಆರಪಿ ವಿಜಯಕುಮಾರ್ ಅಭಿಪ್ರಾಯಪಟ್ಟರು.

ಸಮೀಪದ ರಾಚನಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು ತೆರೆದ ಮನಸ್ಸಿನಿಂದ, ಪರಸ್ಪರ ನಂಬಿಕೆ ಮತ್ತು ಗೌರವ ಭಾವದಿಂದ ಸೇವೆ ಆರಂಭಿಸಿದರೆ ಕಲಿಕೆಯ ಗುಣಮಟ್ಟ ಸರಳವಾಗಿ ಹೆಚ್ಚಿಸಬಹುದು. ಶರಣಬಸಪ್ಪ ಅವರು ಶಿಸ್ತಿನ ಸಿಪಾಯಿಗಳು. ಪರಿಸರ ಪ್ರೇಮಿಗಳು, ಸಮಯ ಪಾಲಕರು. ಅವರ ಸೇವೆ ಹೊಸ ಶಿಕ್ಷಕರಿಗೆ ಮಾದರಿಯಾಗಿದೆ ಎಂದರು.

ಸನ್ಮಾನಿತರಾಗಿ ಶರಣಬಸಪ್ಪ ಮಾತನಾಡಿ, ಮಕ್ಕಳು ಚೆನ್ನಾಗಿ ಓದಬೇಕು, ವಿದ್ಯಾವಂತರಾಗಬೇಕು, ಶಿಸ್ತಿನಿಂದರಬೇಕು, ಸಮಯ ಪಾಲನೆ ಮಾಡಬೇಕು.

ಗುರುಗಳು ಹೇಳಿದ ಮನೆ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಬೇಕು. ತಂದೆ ತಾಯಿಗಳಿಗೆ ಲಿಸಿದ ಗುರುಗಳಿಗೆ ಗೌರವ ಕೊಡಬೇಕು ಎಂದರು. ಶಾಲಾ ಮಕ್ಕಳಿಗೆ ಬ್ಯಾಗು, ಪುಸ್ತಕ, ಪೆನ್ನು ಉಡುಗೊರೆಯಾಗಿ ನೀಡಿದರು.

ಈ ಸಂದರ್ಭದಲ್ಲಿ ಸಿಆರಪಿಗಳಾದ ಷಣ್ಮುಖಪ್ಪ , ಲಿಂಗಾರೆಡ್ಡಿ , ಸುಬ್ರಹ್ಮಣ್ಯ, ಲಿಂಗನಗೌಡ, ಶ್ರೀನಿವಾಸ್, ದೇವೇಂದ್ರಪ್ಪ ಗೌಡ, ಮಲ್ಲನಗೌಡ, ಸಿದ್ದಲಿಂಗ ರೆಡ್ಡಿ, ದೇವಪ್ಪ ಗೌಡ ಕಲಾಲ್, ಮೋಹನ್ ರೆಡ್ಡಿ ಗೌಡ, ಎಸಡಿಎಂಸಿ ಅಧ್ಯಕ್ಷ ರವೀಂದ್ರ ರೆಡ್ಡಿ, ಹಣಮಂತ ಕೋರಿಯಾಳ್, ಸಾಹೇಬ್ ಗೌಡ ಕಲಾಲ್, ಗಂಗಪ್ಪ ಮಡಿವಾಳ, ರುದ್ರಗೌಡ, ವಿಶ್ವನಾಥ್ ರೆಡ್ಡಿ, ಪ್ರಕಾಶ್ ಯರ್, ಬಸವರಾಜ್ ಕಲಾಲ್, ಬಸವರಾಜ್ ಪೂಜಾರಿ, ಹನುಮಂತ ಕುದ್ರಿ, ಸಿದ್ದಪ್ಪ, ಅಶೋಕ್ ರೆಡ್ಡಿ, ನಿಂಗಪ್ಪ ಪೂಜಾರಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಸೇರಿದಂತೆ ಇತರರಿದ್ದರು.

# ಸರ್ವಿಸ್ ರಸ್ತೆಗೆ, ಹೆದ್ದಾರಿ ಹೋಲಿಕೆ ಬೇಡ ಎಂದ ಸಂಸದ ಇ.ತುಕಾರಾಂ



**ಮರಿಯಮ್ಮನಹಳ್ಳಿ, ಜೂ.15:**'ಸರ್ವಿಸ್ ರಸ್ತೆಗೂ ಹಾಗೂ ಹೆದ್ದಾರಿಗೆ ವ್ಯತ್ಯಾಸವಿದ್ದು, ಎರಡಕ್ಕೂ ಹೋಲಿಕೆ ಸರಿಯಲ್ಲ. ಹೆದ್ದಾರಿಯಲ್ಲಿ 200ಟನ್ ಭಾರ ಹೊತ್ತ ವಾಹನಗಳು ಸಾಗುತ್ತವೆ, ಆದರೆ ಸರ್ವಿಸ್ ರಸ್ತೆ ಹಾಗಲ್ಲ' ಎಂದು ಸಂಸದ ಇ.ತುಕಾರಾಂ ಹೇಳಿದರು.

ಸಮೀಪದ 114–ಡಣಾಪುರ ಗ್ರಾಮದ ಬಳಿಯ ರಾಷ್ಟ್ರೀಯ ಹೆದ್ದಾರಿ–50ರ ಸರ್ವಿಸ್ ರಸ್ತೆಯ ಕಳಪೆ ಕಾಮಗಾರಿಯಿಂದ ಗುಂಡಿ ಬಿದ್ದ ಸ್ಥಳಕ್ಕೆ ಭಾನುವಾರ ಅವರು ಭೇಟಿ ನೀಡಿ ಪರಿಶೀಲಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.


'ಕಾಮಗಾರಿ ಬಾಕಿರುವ ಈ ಸರ್ವಿಸ್ ರಸ್ತೆಯಲ್ಲಿ ಕೆಲ ದಿನಗಳ ಹಿಂದೆ 27ಟನ್ ಭತ್ತದ ಮೂಟೆಗಳನ್ನು ಹೊತ್ತು ಬಂದ ಲಾರಿ ಅವಘಡಕ್ಕೆ ಸಿಲುಕಿದ್ದು, ಲಾರಿಯದೇ ತಪ್ಪು. ಅಧಿಕಾರಿಗಳು ಹೇಳುವಂತೆ ಈ ರಸ್ತೆಯ ಕಾಮಗಾರಿ ಇನ್ನು ಬಾಕಿದೆ. ಆದ್ದರಿಂದ ಗುಣಮಟ್ಟದ ಕಾಮಗಾರಿ ಹಾಗೂ ಪಾರದರ್ಶಕತೆಗೆ ಒತ್ತು ನೀಡುವಂತೆ ಆಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ' ಎಂದರು.

54.80ಕೋಟಿ ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿ–50ರ 114–ಡಣಾಪುರ ಹಾಗೂ ಆಲೂರು ಕ್ರಾಸ್ ಸೇರಿದಂತೆ ಎರಡೂ ಕಡೆ ಸರ್ವಿಸ್ ರಸ್ತೆ, ಸೇತುವೆ, ಅಂಡರ್ ಪಾಸ್ ಕಾಮಗಾರಿಗಳು ನಡೆಯುತ್ತಿವೆ. ಇದು ನಮ್ಮ ಕ್ಷೇತ್ರಕ್ಕೆ ತಂದ ಮೊದಲ ಅನುದಾನವಾಗಿದೆ. ಅನುದಾನ ತರುವುದು ಅಭಿವೃದ್ಧಿ ಮಾಡುವುದು ನಮ್ಮ ಕೆಲಸ, ಕಾಮಗಾರಿಯ ನಿರ್ವಹಣೆ ಸೇರಿದಂತೆ ಎಲ್ಲವನ್ನು ನೋಡಿಕೊಳ್ಳುವುದು ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಕೆಲಸ. ಆದರೆ ಕಾಮಗಾರಿಯ ಕುರಿತು ನಮ್ಮ ಹೆಸರು ಬಳಸಿಕೊಂಡು ರಾಜಕೀಯ ಮಾಡುವುದು ಸರಿಯಲ್ಲ' ಎಂದರು.

ನಂತರ ಎನ್‌ಎಚ್‌ಎಐನ ಯೋಜನಾ ನಿರ್ದೇಶಕ ಸುಶೀಲ್ ಹಾಗೂ ಗುತ್ತಿಗೆದಾರರ ನೀರಜ್ ಅವರು, ಈ ಸರ್ವಿಸ್ ರಸ್ತೆಯ ಕಾಮಗಾರಿ ಇನ್ನು ಬಾಕಿ ಇರುವುದರ ಕುರಿತು ಸಂಸದರಿಗೆ ವಿವರಣೆ ನೀಡಿದರು.

ಜಿಲ್ಲಾ ಹೆಚ್ಚುವರಿ ಎಸ್ಪಿ ಮಂಜುನಾಥ್, ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ, ಸಿಪಿಐ ವಿಕಾಸ್ ಲಮಾಣಿ ಸೇರಿದಂತೆ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಗೋವಿಂದರ ಪರಶುರಾಮ, ಪಟ್ಟಣ ಪಂಚಾಯಿತಿ ಅಧ್ಯಕ್ಷ ಆದಿಮನಿ ಹುಸೇನ್ ಬಾಷಾ, ಆರ್.ಮಂಜುನಾಥ್ ಸೇರಿದಂತೆ ಡಣಾಪುರ ಗ್ರಾಮದ ಮುಖಂಡರು ಹಾಜರಿದ್ದರು.

# ಲಲಿತ ಕಲಾ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಮಂಜುನಾಥ ಗೋವಿಂದವಾಡ ಇನ್ನಿಲ್ಲ



**ಬಳ್ಳಾರಿ:** ನಗರದ ಖ್ಯಾತ ಚಿತ್ರಕಲಾವಿದ, ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ ಪುರಸ್ಕೃತ. ಮಂಜುನಾಥ ಗೋವಿಂದವಾಡ(52) ಇವರು ಇಂದು ಬೆಳಗಿನ ಜಾವ 5 ಕ್ಕೆ ಇಲ್ಲಿನ ಅಚ್ಯತ್ ನಗರದ ನಿವಾಸದಲ್ಲಿ ಹೃದಯಾಘಾತದಿಂದ ದೈವಾಧೀನರಾಗಿದ್ದಾರೆ.

ತಾಯಿ ಸರ್ವಮಂಗಳಮ್ಮ, ಪತ್ನಿ ಭಾವನ, ಪುತ್ರಿ ಅಶ್ವಿನಿ, ಪುತ್ರ ಮಹಾಂತೇಶ ಮತ್ತು ಬಂಧು ಬಳಗವನ್ನು ಅಗಲಿದ್ದಾರೆ.

ಇಂದು ಸಂಜೆ 4 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ಜರುಗಲಿದೆ.

ಖ್ಯಾತ ಹಿಂದುಸ್ತನಿ ಗಾಯಕ ಜಾಲಿಬೆಂಚಿ ದೊಡ್ಡಬಸವಾವಾರ್ಯ ಗವಾಯಿಗಳವರ ಮೊಮ್ಮಗನಾಗಿದ್ದ .ಮಂಜುನಾಥ ಗೋವಿಂದವಾಡ ಇವರು ತೈಲ, ಜಲ ವರ್ಣ, ರೇಖಾ ಚಿತ್ರ, ಮರಳಿನಿಂದ ಚಿತ್ರಕಲೆಯನ್ನು ಕುಂಚದಲ್ಲಿ ಅರಳಿಸಿ ಕಲಾ ಮನಸ್ಸುಗಳಲ್ಲಿ ಅಚ್ಚಳಿಯದ ನೆನಪುಗಳನ್ನು ಬಿಟ್ಟುಹೋಗಿದ್ದಾರೆ.

ಹಂಪಿ ಉತ್ಸವ ಸೇರಿದಂತೆ ಜಿಲ್ಲೆಯ ಅನೇಕ ಉತ್ಸವ, ಬೃಹತ್ ಸಮಾರಂಭಗಳ ವೇದಿಕೆಯ ನಿರ್ಮಾಣ ಮಾಡುವ ಮೂಲಕ ಬ್ಯಾನರ್ ಮಂಜುನಾಥ ಎಂದು ಸಹ ಸ್ನೇಹಿತರು ಕರೆಯುತ್ತಿದ್ದರು.

ನಗರಕ್ಕೆ ಬಂದ ಅನೇಕ ಗಣ್ಯರಿಗೆ ತಮ್ಮ ಚಿತ್ರ ಕಲಾ ಗ್ಯಾಲರಿಯನ್ನು ಪರಿಚಯಿಸಿದರು. ಆದರೂ ಇವರ ಕಲಾ ಪ್ರತಿಭಗೆ ಸೂಕ್ತವಾದ ಸಹಕಾರ ಕಲಾ ಕ್ಷೇತ್ರದಲ್ಲಿ ದೊರೆಯಲಿಲ್ಲ ಎನ್ನಬಹುದು.

ನಗರದ ಸಾಂಸ್ಕೃತಿಕ ಸಮುಚ್ಚಯದ ಕನ್ನಡ ಭವನದ ಮೇಲೆ ತಮ್ಮ ಕಲಾ ಗ್ಯಾಲರಿ ಮೂಲಕ ತಾವು ರಚಿಸಿದ ಐತಿಹಾಸಿಕ, ಪ್ರಾಕೃತಿಕ, ಸಾಮಜಿಕ, ಧಾರ್ಮಿಕವಾದ ಚಿತ್ರಗಳ ಪ್ರದರ್ಶನ ಮತ್ತು ಮಾರಾಟ ನಡೆಸಿಕೊಂಡು ಜೀವನ ನಿರ್ವಹಿಸುತ್ತಿದ್ದ ಇವರು ಜೀವನಕ್ಕೆ ಅವಶ್ಯವಾದ ಆರ್ಥಿಕ ಸೌಲಭ್ಯವಿಲ್ಲದೆ ಸಂಕಟವನ್ನು ಆಪ್ತರ ಬಳಿ ಹಂಚಿಕೊಂಡಿದ್ದರು.

ಉತ್ತಮ ನಡೆ ನುಡಿಯ ಸರಳ ಜೀವನದ ಮಂಜುನಾಥನ ನಿಧನಕ್ಕೆ ಕನ್ನಡ ಮತ್ರು ಸಂಸ್ಕೃತಿ ಇಲಾಕೆಯ ನಿವೃತ್ತ ಅಧಿಕಾರಿ, ಚೋರನೂರು ಕೊಟ್ರಪ್ಪ, ಸಹಾಯಕ ನಿರ್ದೇಶಕ ಬಿ.ನಾಗರಾಜ, ಇತಿಹಾಸ ಅಕಾಡೆಮಿ ಜಿಲ್ಲಾ ಅಧ್ಯಕ್ಷ ಟಿ.ಹೆಚ್.ಎಂ.ಬಸವರಾಜ್, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಅಧ್ಯಕ್ಷ ನಿಷ್ಠಿ ರುದ್ರಪ್ಪ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ಎನ್.ವೀರಭದ್ರಗೌಡ, ಕಲಾವಿದ ಹಂದ್ಯಾಳ ಪುರುಷೋತ್ತಮ, ನಗರದ ಮಾಜಿ ಶಾಸಕ ಗಾಲಿ ಸೋಮಶೇಖರ ರೆಡ್ಡಿ, ಎನ್. ಪ್ರತಾಪರೆಡ್ಡಿ ಮೊದಲಾದವರು ಮಂಜುನಾಥ ಅಗಲಿಕೆಯ ನೋವನ್ನು ಅವರ ಕುಟುಂಬಕ್ಕೆ ದೇವರು ನೀಡಲಿ ಎಂದಿದ್ದಾರೆ.

ಶೋಕ:ಮಂಜುನಾಥ ಗೋವಿಂದವಾಡ ಅವರು ಇಡೀ ತನ್ನ ಜೀವನವನ್ನು ಚಿತ್ರಕಲೆಗಾಗಿ ಮೀಸಲಿಟ್ಟಿದ್ದ ಅವರು ಕರ್ನಾಟಕ ಲಲಿತ ಅಕಾಡೆಮಿಯಿಂದ ವರ್ಣಶ್ರೀ ಪ್ರಶಸ್ತಿ ಪಡೆದಿದ್ದರು.ಅವರ ಅಕಾಲಿಕ ನಿಧನವು ತೀವ್ರ ದುಃಖವನ್ನು ಉಂಟುಮಾಡಿದೆಂದು ಬಳ್ಳಾರಿ ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷ ಯಲ್ಲನಗೌಡ ಶಂಕರ ಬಂಡೆ, ಉಪಾದ್ಯಕ್ಷ ಅದೋನಿ ವೀಣಾ ಕಾರ್ಯದರ್ಶಿ ಮುದ್ದಟನೂರು ತಿಪ್ಪೆಸ್ವಾಮಿ, ಖಜಾಂಚಿ ರಮಣಪ್ರ ಭಜಂತ್ರಿ, ಸಹಕಾರ್ಯದರ್ಶಿ ಸುಬ್ಬಣ್ಣ, ವೀರೇಶ ದಳವಾಯಿ ಮೊದಲದವರು ಶೋಕ ವ್ಯಕ್ತಪಡಿಸಿದ್ದಾರೆ

## ಹೊಸಪೇಟೆ: ಎಂ.ಪಿ.ಪ್ರಕಾಶ್ ನಗರದಲ್ಲಿ ನಡು ರಸ್ತೆಯಲ್ಲಿಯೇ ಚಾಕುವಿನಿಂದ ಚುಚ್ಚಿ ವ್ಯಕ್ತಿಯ ಭೀಕರ ಕೊಲೆ



**ಹೊಸಪೇಟೆ.ಜೂ.14** ನಡು ರಸ್ತೆಯಲ್ಲಿಯೇ ವ್ಯಕ್ತಿಯೊರ್ವನನ್ನು ಚಾಕುವಿನಿಂದ ಚುಚ್ಚಿ ಭೀಕರವಾಗಿ ಕೊಲೆ ಮಾಡಿರುವ ಘಟನೆ ನಗರದಲ್ಲಿ ಶನಿವಾರ ರಾತ್ರಿ ಜರುಗಿದೆ.

ನಗರದ ಎಂ.ಪಿ.ಪ್ರಕಾಶ್ ನಗರದಲ್ಲಿ ಶನಿವಾರ ರಾತ್ರಿ 10 ಗಂಟೆ ಸುಮಾರಿಗೆ ಜರುಗಿದ ಘಟನೆಯಲ್ಲಿ ಸ್ಥಳೀಯ ನಿವಾಸಿ ಯೂನೂಸ್(28) ಎಂಬ ವ್ಯಕ್ತಿಯನ್ನು ಎಂ.ಪಿ.ಪ್ರಕಾಶ್ ನಗರದ ರಸ್ತೆಯಲ್ಲಿ ಅಟ್ಟಾಡಿಸಿಕೊಂಡು ಹೋಗಿ ಕಣ್ಣಿಗೆ ಕಾರದಪುಡಿ ಎರಚಿ, ಹೊಟ್ಟೆ, ಕತ್ತು ಭಾಗಕ್ಕೆ ಚಾಕುವಿನಿಂದ ಇರಿದು ನಡು ರಸ್ತೆಯಲ್ಲಿಯೇ ಭೀಕರವಾಗಿ ಕೊಲೆ ಮಾಡಲಾಗಿದೆ.

ರಸ್ತೆಯಲ್ಲಿ ಬಿದ್ದಿದ್ದ ದೇಹ: ಎಂ.ಪಿ.ಪ್ರಕಾಶ್ ನಗರದ ನಿವಾಸಿ ಯೂನೂಸ್ ನನ್ನು ಕೊಲೆ ಮಾಡಿದ ನಂತರ ಕೊಲೆಗಾರರು ಅಲ್ಲಿಂದ ಪರಾರಿ ಆಗಿದ್ದರು. ಮೃತ ದೇಹ ಪೊಲೀಸರು ಬರುವವರೆಗೆ ರಸ್ತೆ ಮಧ್ಯದಲ್ಲಿಯೇ ಬಿದ್ದಿತ್ತು. ಸುದ್ದಿ ತಿಳಿಯುತ್ತಲೇ ಸ್ಥಳಕ್ಕೆ ಆಗಮಿಸಿದ ಗ್ರಾಮೀಣ ಪೊಲೀಸರು ಮೃತ ದೇಹವನ್ನು ನಗರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು.

ಪೊಲೀಸರಿಗೆ ಶರಣು: ವ್ಯಕ್ಯಿಯನ್ನು ಕೊಲೆ ಬರ್ಭರವಾಗಿ ಕೊಲೆ ಮಾಡಿದ ಇಬ್ಬರು ಆರೋಪಿಗಳಾದ ಖಾಜಾ ಹಾಗೂ ಇರ್ಫಾನ್ ಎಂಬುವವರು ತಾವೇ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡು ಚಾಕು ಸಮೇತ ಪೊಲೀಸರಿಗೆ ಶರಣಾಗಿದ್ದಾರೆ.

ಪ್ರೀತಿಗೆ ಅಡ್ಡಿ ಕೊಲೆಗೆ ಕಾರಣ: ಪ್ರೀತಿ ವಿಷಯಕ್ಕೆ ಅಡ್ಡಿಪಡಿಸಿದ ಎಂಬ ಕಾರಣಕ್ಕೆ ವ್ಯಕ್ತಿಯ ಬರ್ಭರ ಕೊಲೆ ಜರುಗಿದೆ. ಚಿತ್ತವಾಡ್ಗಿಯ ನಿವಾಸಿ ಖಾಜಾ ಎಂಬುವಾತ ಯುವತಿಯೊಬ್ಬಳನ್ನು ಪ್ರೀತಿಸಿದ್ದು. ಅದಕ್ಕೆ ಯೂನೂಸ್ ಅಡ್ಡಿಪಡಿಸಿದ ಎಂಬ ಕಾರಣಕ್ಕೆ, ಆರೋಪಿಗಳಾದ ಖಾಜಾ ಹಾಗೂ ಇರ್ಫಾನ್ ಎಂಬಿಬ್ಬರು ಸೇರಿ ಬೀಕರವಾಗಿ ಕೊಲೆ ಮಾಡಿದ್ದಾರೆ ಎನ್ನಲಾಗಿದೆ.

ಮೃತ ವ್ಯಕ್ತಿಗೆ ಮದುವೆಯಾಗಿ ಒಂದು ಮಗು ಇದೆ ಎಂದು ತಿಳಿದು ಬಂದಿದೆ. ಯಾರ ತಂಟೆಗೂ ಹೋಗದೆ ತಾನಾಯಿತು ತನ್ನ ಕೆಲಸವಾಯಿತು ಎನ್ನುವ ರೀತಿಯಲ್ಲಿ ಇದ್ದ ಎಂದು ಮೃತ ವ್ಯಕ್ತಿಯ ಕುಟುಂಬಸ್ಥರು ತಿಳಿಸಿದ್ದಾರೆ.

ಸ್ಥಳಕ್ಕೆ ಅಡಿಷನಲ್ ಎಸ್ಪಿ ಜಿ.ಮಂಜುನಾಥ, ಹೊಸಪೇಟೆ ಡಿವೈಎಸ್ಪಿ ಪಿ.ಮುರಳೀಧರ್, ಗ್ರಾಮೀಣ ಠಾಣೆ ಪಿಐ ಗುರುರಾಜ ಕಟ್ಟಿಮನಿ ಭೇಟಿ ನೀಡಿದ್ದರು.

ಈ ಕುರಿತು ಹೊಸಪೇಟೆ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು. ಆರೋಪಿಗಳನ್ನು ವಶಕ್ಕೆ ಪಡೆದಿರುವ ಗ್ರಾಮೀಣ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಕೋಟ್

ಕ್ಷುಲ್ಲಕ ಕಾರಣಕ್ಕೆ ಎಂ.ಪಿ.ಪ್ರಕಾಶ್ ನಗರದಲ್ಲಿ ಯೂನೂಸ್ ಎಂಬ ವ್ಯಕ್ತಿಯನ್ನು ಇಬ್ಬರು ಆರೋಪಿಗಳು ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ್ದಾರೆ. ಕೊಲೆ ಆರೋಪಿಗಳು ಪೊಲೀಸರಿಗೆ ಶರಣಾಗಿದ್ದಾರೆ. ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು. ತನಿಖೆ ಮುಂದುವರೆದಿದೆ.

ಎಸ್.ಜಾಹ್ನವಿ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ವಿಜಯನಗರ.

ಕೋಟ್–ರಾತ್ರಿ 9–45ರ ಸುಮಾರಿಗೆ ನಾನು ನನ್ನ ಮಗನಿಗೆ ಊಟಕ್ಕೆ ಕರೆ ಮಾಡಿದ್ದೆ. 10 ನಿಮಿಷದಲ್ಲಿ ಬರುತ್ತೇನೆ ಎಂದು ಹೇಳಿದ್ದ. ಸ್ವಲ್ಪ ಹೊತ್ತಿನಲ್ಲಿಯೇ ನನ್ನ ಮಗ ಕೊಲೆಯಾದ ವಿಷಯ ತಿಳಿಯಿತು. ಕೊಲೆಗೆ ಕಾರಣ ಗೊತ್ತಿಲ್ಲ. ಕೊಲೆ ಮಾಡಿದವರಿಗೆ ತಕ್ಕ ಶಿಕ್ಷೆ ಆಗಬೇಕು.

ನಜೀರ್ ಅಹಮದ್,ಮೃತ ವ್ಯಕ್ತಿಯ ತಂದೆ ಹೊಸಪೇಟೆ.

# ಹಸರಗುಂಡಗಿ ಗ್ರಾಮಕ್ಕೆ ಮೂಲಭೂತ ಸೌಕರ್ಯ ಒದಗಿಸಲು ಒತ್ತಾಯ



**ಕಲಬುರಗಿ,ಜೂ.15–**ಅಫಜಲಪೂರ ತಾಲೂಕಿನ ಹಸರಗುಂಡಗಿ ಗ್ರಾಮದ ಸಮಗ್ರ ಅಭಿವೃದ್ಧಿ ಹಾಗೂ ಸಾರ್ವಜನಿಕರ ಮೂಲಭೂತ ಅಗತ್ಯಗಳ ಪೂರೈಕೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಡಾ.ಬಾಬು ಜಗಜೀವನರಾಂ ತರುಣ ಸಂಘದ ಅಧ್ಯಕ್ಷ ರಾಜು ಎಸ್.ಕಟ್ಟಿಮನಿ ಅವರು ಅಫಜಲಪೂರ ಕ್ಷೇತ್ರದ ಶಾಸಕ ಎಂ.ವೈ.ಪಾಟೀಲ್ ಅವರಿಗೆ ಮನವಿ ಸಲ್ಲಿಸಿದರು.

ಗ್ರಾಮದ ಜನಜೀವನಕ್ಕೆ ನೇರವಾಗಿ ಸಂಬಂಧಿಸಿದ ಹಲವು ಸಮಸ್ಯೆಗಳ ಕುರಿತು ಮನವಿಯಲ್ಲಿ ಪ್ರಸ್ತಾಪಿಸಿರುವ ಅವರು, ಮಹಿಳೆಯರಿಗೆ ಸಾರ್ವಜನಿಕ ಶೌಚಾಲಯದ ಕೊರತೆಯಿಂದ ತೀವ್ರ ತೊಂದರೆ ಉಂಟಾಗುತ್ತಿದ್ದು, ಶೀಘ್ರದಲ್ಲೇ ಸುಸಜ್ಜಿತ ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಪ್ರತಿ ಶುಕ್ರವಾರ ನಡೆಯುವ ವಾರದ ಸಂತೆಗಾಗಿ ಪ್ರತ್ಯೇಕ ಹಾಗೂ ವಿಶಾಲ ಜಾಗವನ್ನು ಮೀಸಲಿಡುವ ಮೂಲಕ ಸಂಚಾರ ದಟ್ಟಣೆ ಮತ್ತು ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಬೇಕು ಎಂದು ಮನವಿ ಮಾಡಿದ್ದಾರೆ.

ಗ್ರಾಮದ ಆಂತರಿಕ ರಸ್ತೆಗಳು ಹದಗೆಟ್ಟಿದ್ದು, ಸಮರ್ಪಕ ಚರಂಡಿ ವ್ಯವಸ್ಥೆಯ ಕೊರತೆಯಿಂದ ಕೊಳಚೆ ನೀರು ರಸ್ತೆಗಳಲ್ಲಿ ಹರಿಯುತ್ತಿರುವುದರಿಂದ ಸಾರ್ವಜನಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಆದ್ದರಿಂದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ತುರ್ತಾಗಿ ಕೈಗೆತ್ತಿಕೊಳ್ಳುವಂತೆ ಒತ್ತಾಯಿಸಿದ್ದಾರೆ.

ಹಸುರಗುಂಡಗಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಕೊರತೆಯಿಂದ ಗ್ರಾಮಸ್ಥರಿಗೆ ಸಮರ್ಪಕ ಆರೋಗ್ಯ ಸೇವೆ ದೊರೆಯುತ್ತಿಲ್ಲ. ಹೀಗಾಗಿ ಪ್ರತಿದಿನ ವೈದ್ಯರ ಹಾಜರಾತಿ ಖಚಿತಪಡಿಸುವುದರ ಜೊತೆಗೆ ಅಗತ್ಯ ವೈದ್ಯಕೀಯ ಸಿಬ್ಬಂದಿಯನ್ನು ನಿಯೋಜಿಸಬೇಕು ಎಂದು ಆಗ್ರಹಿಸಿದ್ದಾರೆ.

ಗ್ರಾಮದ ಪ್ರಮುಖ ಓಣಿಗಳಲ್ಲಿ ಹೈಮಾಸ್ಟ್ ದೀಪಗಳನ್ನು ಅಳವಡಿಸಿ ಸಾರ್ವಜನಿಕರ ಭದ್ರತೆ ಹಾಗೂ ರಾತ್ರಿ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕು. ಜೊತೆಗೆ ಮಾದಿಗರ ಓಣಿಯಲ್ಲಿರುವ ಕುಡಿಯುವ ನೀರಿನ ತೆರೆದ ಬಾವಿಯನ್ನು ದುರಸ್ತಿಗೊಳಿಸಿ ಸಾರ್ವಜನಿಕ ಬಳಕೆಗೆ ಯೋಗ್ಯವಾಗಿಸಬೇಕೆಂದು ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಚಂದಪ್ಪ ಕಟ್ಟಿಮನಿ, ರಾಜು ಕಟ್ಟಿಮನಿ, ಸಾಗರ ಕಟ್ಟಿಮನಿ, ಶಿವರಾಜಕುಮಾರ, ಸಾಗರ್ ಬಿಟಿ, ಸಾಜನಕುಮಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಮೃತ ಅಗ್ನಿಶಾಮಕ ಸಿಬ್ಬಂದಿಯ ಕುಟುಂಬಕ್ಕೆ 90 ಲಕ್ಷ ವಿಮಾ ಪರಿಹಾರ




**ಕಲಬುರಗಿ, ಜೂ 15:** ಬ್ಯಾಂಕ್ ಆಫ್ ಬರೋಡಾ ತನ್ನ ಸ್ಯಾಲರಿ ಪ್ಯಾಕೇಜ್ ಯೋಜನೆಯಡಿ ಮೃತ ಅಗ್ನಿಶಾಮಕ ಸಿಬ್ಬಂದಿ ಸ್ವ. ರವೀಂದ್ರ ರತ್ನಾಕರ್ ಅವರ ಕುಟುಂಬಕ್ಕೆ 90 ಲಕ್ಷ ವಿಮಾ ಮೊತ್ತದ ಚೆಕ್ ಹಸ್ತಾಂತರಿಸಿತು. ಈ ಕಾರ್ಯಕ್ರಮವು ನಗರದ ಅಗ್ನಿಶಾಮಕ ಇಲಾಖೆಯ ಕಚೇರಿಯಲ್ಲಿ ಶುಕ್ರವಾರ ನಡೆಯಿತು.

ಅಗ್ನಿಶಾಮಕ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ರವೀಂದ್ರ ರತ್ನಾಕರ್ ಅವರ ಅಕಾಲಿಕ ನಿಧನದ ಹಿನ್ನೆಲೆಯಲ್ಲಿ, ಬ್ಯಾಂಕ್ ಆಫ್ ಬರೋಡಾ ವತಿಯಿಂದ ಅವರ ನಾಮನಿರ್ದೇಶಿತೆ ರೇಣುಕಾ ಸಂಗಪ್ಪ ರತ್ನಾಕರ್ ಅವರಿಗೆ 90 ಲಕ್ಷ ಮೊತ್ತದ ಚೆಕ್ ವಿತರಿಸಲಾಯಿತು. ಈ ಯೋಜನೆಯು ರಕ್ಷಣಾ ಸಿಬ್ಬಂದಿ ಹಾಗೂ ಅಪಾಯಭರಿತ ಸೇವೆಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಸಮಗ್ರ ವಿಮಾ ರಕ್ಷಣೆಯನ್ನು ಒದಗಿಸುತ್ತದೆ.

ಕಾರ್ಯಕ್ರಮದಲ್ಲಿ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ರವಿಕುಮಾರ್ ಎನ್. ಚವ್ಹಾನ್, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಮಲ್ಲಿಕಾರ್ಜುನ ಬಿ.ಎಚ್., ಠಾಣಾ ಅಗ್ನಿಶಾಮಕ ಅಧಿಕಾರಿ ಪ್ರವೀಣ್ ಸೇರಿದಂತೆ ಅಗ್ನಿಶಾಮಕ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬ್ಯಾಂಕ್ ಆಫ್ ಬರೋಡಾ ಪರವಾಗಿ ಡಿಫೆನ್ಸ್ ಬ್ಯಾಂಕಿಂಗ್ ಸಲಹೆಗಾರ ಏರ್ ಕಮಾಂಡರ್ ತರುಣ್ ಕುಮಾರ್ ಸಿನ್ಹಾ, ಸಹಾಯಕ ಮಹಾಪ್ರಬಂಧಕ ಹಾಗೂ ಪ್ರಾದೇಶಿಕ ಮುಖ್ಯಸ್ಥ ಅಮಿತ್ ಸಿ. ಶೆಟ್ಟಿ ಹಾಗೂ ಉಪ ಪ್ರಾದೇಶಿಕ ವ್ಯವಸ್ಥಾಪಕ ಎನ್.ವಿ. ಭೀಮ ಶಂಕರ್ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಬ್ಯಾಂಕ್ ಅಧಿಕಾರಿಗಳು, ರವೀಂದ್ರ ರತ್ನಾಕರ್ ಅವರಂತಹ ಧೈರ್ಯಶಾಲಿ ಸಿಬ್ಬಂದಿಯ ನಷ್ಟವನ್ನು ಭರಿಸಲು ಸಾಧ್ಯವಿಲ್ಲ. ಆದರೆ ಅವರ ಕುಟುಂಬಕ್ಕೆ ಆರ್ಥಿಕ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಬ್ಯಾಂಕ್ ಸದಾ ಬದ್ಧವಾಗಿದೆ ಎಂದು ತಿಳಿಸಿದರು.

ಅಗ್ನಿಶಾಮಕ ಇಲಾಖೆ ಅಧಿಕಾರಿಗಳು ವಿಮಾ ಮೊತ್ತದ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಿದ ಬ್ಯಾಂಕ್ ಆಫ್ ಬರೋಡಾಗೆ ಕೃತಜ್ಞತೆ ಸಲ್ಲಿಸಿದರು. ಕರ್ತವ್ಯ ನಿರ್ವಹಣೆಯ ವೇಳೆ ಜೀವ ಪಣಕ್ಕಿಡುವ ಸಿಬ್ಬಂದಿಗೆ ಇಂತಹ ವಿಮಾ ಸೌಲಭ್ಯಗಳು ಮಹತ್ವದ ಭದ್ರತೆಯಾಗಿ ಕಾರ್ಯನಿರ್ವಹಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಮೃತರ ಕುಟುಂಬ ಸದಸ್ಯರು ಚೆಕ್ ಸ್ವೀಕರಿಸಿದ್ದು, ಅಗ್ನಿಶಾಮಕ ಸಮುದಾಯದ ಸದಸ್ಯರು ಉಪಸ್ಥಿತರಿದ್ದರು.

# ಬಾವಿಗೆ ಬಿದ್ದ ವಾಹನ; 8 ಮಂದಿ ದುರ್ಮರಣ

**ಮುಂಬೈ, ಜೂ.15:** ಚಾಲಕನ ನಿಯಂತ್ರಣ ತಪ್ಪಿ ಪಿಕ್ ಅಪ್ ವಾಹನವೊಂದು ರಸ್ತೆ ಬದಿಯ ತೆರೆದ ಬಾವಿಗೆ ಬಿದ್ದ ಪರಿಣಾಮ ನಾಲ್ವರು ಮಹಿಳೆಯರು ಮತ್ತು ನಾಲ್ವರು ಮಕ್ಕಳು ಸೇರಿ ಎಂಟು ಮಂದಿ ಮೃತಪಟ್ಟಿರುವ ಘಟನೆ ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯ ಮಲ್ಶಿರಾಸ್ ತಹಸಿಲ್‌ನಲ್ಲಿ ನಡೆದಿದೆ. ಘಟನೆಯಲ್ಲಿ ಏಳು ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.ಪಂಡರಾಪುರ ಮೂಲದ 15 ಜನರು ಮಾಸ್ವಾಡ್‌ನ ದೇವಸ್ಥಾನಕ್ಕೆ ಭೇಟಿ ನೀಡಿ ಹಿಂತಿರುಗುತ್ತಿದ್ದರು. ಈ ವೇಳೆ ತಂಡುಲ್ವಾಡಿ ಗ್ರಾಮದ ಬಳಿ ಈ ಅಪಘಾತ ಸಂಭವಿಸಿದೆ. ಪಿಕಪ್‌ನಲ್ಲಿ ಇದ್ದವರು ಹೆಚ್ಚಿನವರು ಸಂಬಂಧಿಕರು ಮತ್ತು ನೆರೆಹೊರೆಯವರು ಎಂದು ತಿಳಿದುಬಂದಿದೆ.ಪ್ರಾಥಮಿಕ ಮಾಹಿತಿಯ ಪ್ರಕಾರ, 15 ಜನರನ್ನು ಹೊತ್ತೊಯ್ಯುತ್ತಿದ್ದ ಪಿಕ್–ಅಪ್ ವಾಹನವು ಭಾನುವಾರ ಸಂಜೆ 5 ಗಂಟೆ ಸುಮಾರಿಗೆ ಚಾಲಕನ ನಿಯಂತ್ರಣ ತಪ್ಪಿ, ರಸ್ತೆಬದಿಯ ಜಮೀನಿಗೆ ನುಗ್ಗಿ ಬಾವಿಗೆ ಬಿದ್ದಿದೆ. ಇದರಿಂದಾಗಿ 8 ಮಂದಿ ಸಾವನ್ನಪ್ಪಿದ್ದಾರೆ. ಸದ್ಯ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸೋಲಾಪುರದ ಪೊಲೀಸ್ ವರಿಷ್ಠಾಧಿಕಾರಿ ಅತುಲ್ ಕುಲಕರ್ಣಿ ತಿಳಿಸಿದ್ದಾರೆ.ಅಪಘಾತದಲ್ಲಿ ಮೃತಪಟ್ಟವರಿಗೆ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಸಂತಾಪ ಸೂಚಿಸಿದ್ದಾರೆ. ಮೃತರ ಕುಟುಂಬಸ್ಥರಿಗೆ 5 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ.ಸೋಲಾಪುರ ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿ ಅಪಘಾತ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಸೀಲನೆ ನಡೆಸಿದ್ದಾರೆ.

**Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.**
**Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE**